# ವಿಶ್ವ ಅಸ್ತಮಾ ದಿನ-2025

## ಇನ್ಹೆಲ್ಡ್ ಔಷಧಗಳು ಎಲ್ಲರಿಗೂ ಲಭ್ಯವಾಗಲಿ

ಪ್ರತಿ ವರ್ಷವೂ ಮೇ ತಿಂಗಳ ಮೊದಲ ಮಂಗಳವಾರವನ್ನು ವಿಶ್ವ ಅಸ್ತಮಾ ದಿನವಾಗಿ ಆಚರಿಸಲಾಗುತ್ತದೆ. ಈ ಬಾರಿ, 2025 ರ ವಿಶ್ವ ಅಸ್ತಮಾ ದಿನದ ಥೀಮ್ ( ಇನ್ಹೆಲ್ಡ್ ಔಷಧಗಳು ಎಲ್ಲರಿಗೂ ಲಭ್ಯವಾಗಲಿ )ಎಂದು ಘೋಷಿಸಿರುವ ಅಸ್ತಮಾ ನಿಯಂತ್ರಣದತ್ತ ಗಂಭೀರ ಗಮನ ಹರಿಸಲಿದೆ.



**ಅಸ್ತಮಾ ಎಂದರೇನು ?**

ಅಸ್ತಮಾ ಎಂಬುದು ಒಂದು ನಿರಂತರವಾದ ಉಸಿರಾಟದ ಸಮಸ್ಯೆ. ಸುಲಭವಾಗಿ ಹೇಳಬೇಕಾದರೆ ಅಸ್ತಮಾ ಇರುವ ಮಕ್ಕಳ ಉಸಿರಾಟದ ಮಾರ್ಗಗಳು ತುಂಬಾ ಸೂಕ್ಷ್ಮವಾಗಿರುತ್ತವೆ. ಧೂಳು, ಹೊಗೆ, ತೀವ್ರ ವಾಸನೆಗಳು, ತಣ್ಣನೆಯ ಗಾಳಿ, ಓಟ, ವ್ಯಾಯಾಮಅಥವಾವೈರಲ್‌ಸೋಂಕುಗಳು. ಇವುಗಳು ಅಸ್ತಮಾ ರೋಗವನ್ನು ತೀವ್ರಗೊಳಿಸುತ್ತವೆ. ಇದರಿಂದ ಉಸಿರಾಟದ ಮಾರ್ಗಗಳು ಉಬ್ಬಿದಂತಾಗುತ್ತವೆ. ಬಿಗಿಯಾಗುತ್ತವೆ. ಇದರಿಂದ ಉಸಿರಾಟಕ್ಕೆ ತೊಂದರೆಯಾಗುತ್ತದೆ.

**ಸಾಮಾನ್ಯ ಲಕ್ಷಣಗಳು ಏನು ?**

ಇದು ಮಕ್ಕಳಲ್ಲಿ ಕಾಣುವ ಅಸ್ತಮಾದ ಪ್ರಮುಖ ಸೂಚನೆಗಳು:

* ಪುನರಾವೃತವಾಗುವ ಕೆಮ್ಮು ? ವಿಶೇಷವಾಗಿ ರಾತ್ರಿ ಅಥವಾ ಬೆಳಗಿನ ಜಾವ ಅಥವಾ ಆಟವಾಡಿದ ನಂತರ.
* ಶಬ್ದದೊಂದಿಗೆ ಉಸಿರಾಟ (ವೀಜಿಂಗ್) ? ಉಸಿರೆಳೆದಾಗ ಶಿಳ್ಳೆ ಶಬ್ದ ಬರುವದು.
* ಉಸಿರಾಟದಲ್ಲಿ ತೊಂದರೆ, ಓಡಿದ ನಂತರ ಅಥವಾ ಕೆಲವೊಮ್ಮೆ ವಿಶ್ರಾಂತಿಯಲ್ಲಿಯೂ ಸಹ ಉಸಿರಾಡಲು ಕಷ್ಟ.
* ಎದೆ ತೀವ್ರತೆ ? ದೊಡ್ಡ ಮಕ್ಕಳು ತಮ್ಮ ಎದೆ ಬಿಗಿಯಾಗಿದೆ ಅಥವಾ ಭಾರವಾಗಿದೆ ಎಂದು ಹೇಳಬಹುದು.
* ಆಟದ ಸಮಯದಲ್ಲಿ ಸುಸ್ತಾಗುವುದು.

**ಮನೆಯಲ್ಲೇ ಶೀಘ್ರಅಸ್ತಮಾಗುರುತಿಸುವುದು ಹೇಗೆ ?**

ಹೆಚ್ಚೆಚ್ಚು ಮಕ್ಕಳು ತಿಂಗಳುಗಟ್ಟಲೆ ಅಥವಾ ವರ್ಷಗಳವರೆಗೆ ಅಸ್ತಮಾ ಇದ್ದರೂ ಪತ್ತೆಯಾಗದೆ ಇರುತ್ತಾರೆ.ನೀವುಪಾಲಕರಾಗಿ ಈ ಕೆಳಗಿನವುಗಳನ್ನು ಗಮನಿಸಬೇಕು:

1) ಮಾದರಿಯನ್ನು ಗಮನಿಸಿ:
ರಾತ್ರಿ ಅಥವಾ ಬೆಳಿಗ್ಗೆ ಹೆಚ್ಚು ಕೆಮ್ಮುತ್ತಾ ? ಅಥವಾ ಓಡಿದ ನಂತರ ? ಅಥವಾ ಆಟವಾಡಿದ ನಂತರ ? ? ಇದೊಂದು ಎಚ್ಚರಿಕೆ ಸೂಚನೆ.

2) ಪ್ರತಿ ಶೀತವು ವಾರಗಳವರೆಗೆ ಇರುವ ಕೆಮ್ಮಿನಲ್ಲಿ ಕೊನೆಗೊಂಡರೆ ಅಥವಾ ಉಬ್ಬಸವನ್ನು ತಂದರೆ ಅದು ಅಪಾಯಕಾರಿ.

3) ಅಸ್ತಮಾ, ಅಲರ್ಜಿ ಅಥವಾ ಚರ್ಮದ ಸಮಸ್ಯೆಗಳು ಕುಟುಂಬದಲ್ಲಿ ಇದ್ದರೆ ಅಸ್ತಮಾ ಬರುವ ಸಾಧ್ಯತೆ ಹೆಚ್ಚು.

4) ಶಬ್ದದೊಂದಿಗೆ ಉಸಿರಾಟ (ವೀಜಿಂಗ್) ? ಉಸಿರೆಳೆದಾಗ ಶಿಳ್ಳೆ ಶಬ್ದ ಬರುವದು.

**ಶೀಘ್ರ ಗುರುತಿಸುವುದು ಮುಖ್ಯ.**

ಸರಿಯಾದ ಚಿಕಿತ್ಸೆ ಮತ್ತು ಕಾಳಜಿಯಿಂದ ಮಕ್ಕಳ ಅಸ್ತಮಾವನ್ನು ಸಂಪೂರ್ಣವಾಗಿ ನಿಯಂತ್ರಿಸಬಹುದು. ಅವರು ಸಾಮಾನ್ಯ ಮಕ್ಕಳಂತೆ ಓಡಬಹುದು, ಆಟವಾಡಬಹುದು, ವಿದ್ಯಾಭ್ಯಾಸ ಮಾಡಬಹುದು. ಆದರೆ ನಿರ್ಲಕ್ಷಿಸಿದಾಗ ಅಸ್ತಮಾವು ಶಾಲೆಗೆ ಗೈರು ಹಾಜರಿ, ಆಸ್ಪತ್ರೆ ಭೇಟಿಗಳು ಮತ್ತು ಅನಗತ್ಯ ನೋವನ್ನು ಉಂಟು ಮಾಡಬಹುದು.

ವಿಶ್ವದಾದ್ಯಂತ ಸುಮಾರು 260 ಮಿಲಿಯನ್ ಜನರು ಅಸ್ತಮಾ ಕಾಯಿಲೆಯಿಂದ ಬಳಲುತ್ತಿದ್ದು, ಪ್ರತಿ ವರ್ಷ ಸುಮಾರು ನಾಲ್ಕೈದು ಲಕ್ಷ ಮಂದಿ ಈ ಕಾಯಿಲೆಯಿಂದ ಸಾವನ್ನಪ್ಪುತ್ತಿದ್ದಾರೆ ಎಂಬುದು ತೀವ್ರ ಆತಂಕದ ವಿಷಯವಾಗಿದೆ. ಇವರಲ್ಲಿ ಬಹುತೇಕರ ಸಾವಿಗೆ ಕಾರಣ, ಸರಿಯಾದ ಔಷಧ ಉಪಚಾರ ಲಭ್ಯವಿಲ್ಲದಿರುವದು.

ಉಪಚಾರ ಲಭ್ಯವಿದ್ದರೆ, ಅಸ್ತಮಾ ನಿಯಂತ್ರಣ ಸಾಧ್ಯ.

ಅಸ್ತಮಾ ಚಿಕಿತ್ಸೆಗಾಗಿ ವೈದ್ಯರು ಪ್ರಧಾನವಾಗಿ ಎರಡು ವಿಧದ ಇನ್ಹೆಲರ್ ಗಳನ್ನು ಬಳಸಲು ಶಿಫಾರಸು ಮಾಡುತ್ತಾರೆ:

1) ತಡೆಗಟ್ಟುವ ಇನ್ಹೆಲರ್ : ಸಾಮಾನ್ಯವಾಗಿ ಕೊರ್ಟಿಕೋಸ್ಟೆರಾಯ್ಡ್ ವನ್ನು ಒಳಗೊಂಡಿರುತ್ತವೆ.

2) ರಿಲೀವ ಇನ್ಹೆಲರ್: ತಕ್ಷಣದ ಉಸಿರಾಟದ ತೊಂದರೆಗಳಿಗೆ ಉಪಯೋಗವಾಗುತ್ತದೆ.

ಜಿ.ಐ.ಎನ್.ಎ. ವಿಶ್ವದ ವೈದ್ಯ ಸಮುದಾಯಕ್ಕೆ, ಈ ಎರಡೂ ಔಷಧಗಳನ್ನು ಪ್ರತಿ ಅಸ್ತಮಾ ರೋಗಿಗೆ ಲಭ್ಯವಾಗುವಂತೆ ಮಾಡಬೇಕೆಂದು ಕರೆ ನೀಡಲಾಗಿದೆ.

ಆರ್ಥಿಕ ಅಡೆತಡೆಗಳು ಇನ್ನೂ ದೊಡ್ಡ ಸಮಸ್ಯೆ.

96% ಅಸ್ತಮಾ ಸಾವುಗಳು ಆದಾಯ ಕಡಿಮೆ ಇರುವ ಅಥವಾ ಮಧ್ಯಮ ಮಟ್ಟದ ದೇಶಗಳಲ್ಲಿ ಸಂಭವಿಸುತ್ತಿವೆ. ಔಷಧಗಳ ಲಭ್ಯತೆ ಅಥವಾ ಹೆಚ್ಚು ಬೆಲೆ ಮುಖ್ಯವಾದ ಅಡ್ಡಿಯಾಗಿವೆ.

ಇಲ್ಲದಿದ್ದರೆ, ಈ ಸಾವುಗಳನ್ನು ತಡೆ ಹಿಡಿಯುವುದು ಬಹುಮಟ್ಟಿಗೆ ಸಾಧ್ಯ.

**ಪೋಷಕರಿಗೆ ಮಾಹಿತಿ ಅಗತ್ಯ:**

**ವೈದ್ಯಕೀಯ ತಜ್ಞರು ಪೋಷಕರಿಗೆ ಈ ಕೆಳಗಿನ ಸೂಚನೆಗಳನ್ನು ನೀಡಬೇಕು:**

* ಮಕ್ಕಳಿಗೆ ಪ್ರತಿದಿನದ ತಡೆಗಟ್ಟುವ ಔಷಧ ಲಭ್ಯವಿದೆಯೆಂದು ಪರಿಶೀಲಿಸಿ.
* ಇನ್ಹೆಲರ್ ಸರಿಯಾಗಿ ಬಳಸುವ ವಿಧಾನ ತಿಳಿದುಕೊಳ್ಳಿ.
* ಔಷಧದ ಖರ್ಚು ಅಧಿಕವಾದರೆ, ಸರ್ಕಾರದ ಸಹಾಯ ಯೋಜನೆಗಳ ಬಗ್ಗೆ ಮಾಹಿತಿ ಪಡೆಯಿರಿ.

ಸಮಾಜದ ಎಲ್ಲ ವರ್ಗಗಳ ಸಹಕಾರ ಅಗತ್ಯ.

* ಜಿಐಎನ್‌ಎ ಎಲ್ಲಾ ಸರ್ಕಾರಗಳು, ಆರೋಗ್ಯ ನೀತಿ ತೀರ್ಮಾನಕಾರರು, ಔಷಧ ಕಂಪನಿಗಳು ಮತ್ತು ಸಾರ್ವಜನಿಕರಿಂದ ಸಹಕಾರದ ನಿರೀಕ್ಷೆಯಲ್ಲಿದೆ. ಔಷಧಗಳ ಲಭ್ಯತೆ ಸುಧಾರಣೆಗೊಳಪಡಿಸುವಮೂಲಕ ಸಾವಿರಾರು ಜನರ ಜೀವ ಉಳಿಸಲು ಸಾಧ್ಯ. ಮಕ್ಕಳ ಉಸಿರಾಟದ ಹಕ್ಕಿಗೆ ಬೆಂಬಲ ನೀಡೋಣ.

2025 ರ ವಿಶ್ವ ಅಸ್ತಮಾ ದಿನವು, ಪ್ರತಿ ಮಗುವಿಗೂ ಸಮರ್ಪಿತವಾಗಿರಲಿ ಎಂಬ ಉದ್ದೇಶ ಹೊಂದಿದ್ದು, ಮಕ್ಕಳಿಗೆ ಉತ್ತಮ ಆರೋಗ್ಯ, ಸುಖದ ಬದುಕು ನೀಡಲು ನಾವು ಎಲ್ಲರೂ ಹೆಜ್ಜೆ ಇಡಬೇಕಾಗಿದೆ.

* * *



**ಡಾ. ಪ್ರಶಾಂತ ತೆಗ್ಗಿ**
**ಮಕ್ಕಳ ಹಾಗೂ ನವಜಾತ ಶಿಶುಗಳ ತಜ್ಞರು,**
**ತೆಗ್ಗಿ ಆಸ್ಪತ್ರೆ ,ಬೀಳಗಿ**
**ಮೊಬೈಲ್ ಸಂಖ್ಯೆ 8310434546**

## "ಈ ಪಾದ ಪುಣ್ಯ ಪಾದ" ಕ್ಕೆ ಪ್ರಶಸ್ತಿಯ ಗರಿ

**ಬೆಂಗಳೂರ :** ಹೊಸ ಹೊಸ ವಿಷಯ, ವಿಭಿನ್ನ ಪ್ರಯೋಗಗಳ ಮೂಲಕ ಚಿತ್ರರಂಗದಲ್ಲಿಗುರುತಿಸಿಕೊಂಡಿರುವ ಪ್ರತಿಭಾವಂತ ಯುವ ನಿರ್ದೇಶಕ 'ಸಿದ್ದು ಪೂರ್ಣಚಂದ್ರ' ರವರು ಕಥೆ ಬರೆದು ನಿರ್ದೇಶನ ಮಾಡಿರುವ 'ಈ ಪಾದ ಪುಣ್ಯ ಪಾದ' ಚಿತ್ರಕ್ಕೆ ಪ್ರತಿಷ್ಠಿತ ಚಲನಚಿತ್ರೋತ್ಸವಗಳಲ್ಲೊಂದಾದ "ದಾದಾ ಸಾಹೇಬ್ ಫಾಲ್ಕೆ" ಚಲನ ಚಿತ್ರೋತ್ಸವದಲ್ಲಿ ಪ್ರದರ್ಶನವಾಗಿ 'ಬೆಸ್ಟ್ ಜ್ಯೂರಿ ಅವಾರ್ಡ್' ಪಡೆದುಕೊಂಡಿದೆ.





ಈ ಚಿತ್ರವು ಬಿಡುಗಡೆ ಮುನ್ನವೆ ಈಗಾಗಲೇ ಹಲವು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವಗಳಲ್ಲಿ ಭಾಗವಹಿಸಿ ಅನೇಕ ಪ್ರಶಸ್ತಿಗಳನ್ನು ತನ್ನದಾಗಿಸಿಕೊಂಡಿದೆ. ಒಬ್ಬ ಆನೆ ಕಾಲುರೋಗಿಯ ಕಥಾ ವಸ್ತುವನ್ನು ಒಳಗೊಂಡಿದ್ದು ,ಮನುಷ್ಯನಿಗೆ ದೈಹಿಕವಾಗಿ ಯಾವುದೇ ಕಾಯಿಲೆಗಳು ಬಂದಾಗ ಮಾನಸಿಕ ಸ್ಥಿತಿಯ ಅರಿವು ಮತ್ತು ಆ ವ್ಯಕ್ತಿಯ ಸಂಬಂಧಗಳ ಮನಸ್ಥಿತಿ ಹೇಗಿರುತ್ತದೆ ಎಂಬ ಅತೀ ಸೂಕ್ಷ್ಮ ವಿಷಯಗಳನ್ನು ಈ ಚಿತ್ರ ಒಳಗೊಂಡಿದೆ. ತಮ್ಮ ಪ್ರತಿ ಚಿತ್ರದಲ್ಲೂ ಒಂದೊಂದು ವಿಭಿನ್ನ ವಿಷಯಗಳನ್ನಿಟ್ಟುಕೊಂಡು ಸಿನಿಮಾ ಮಾಡುತ್ತಾ ಬಂದಿರುವ ಸಿದ್ದು ಪೂರ್ಣಚಂದ್ರ. 'ದಾರಿ ಯಾವುದಯ್ಯ ವೈಕುಂಠಕ್ಕೆ' ಮತ್ತು 'ತಾರಿಣಿ' ಚಿತ್ರಗಳ ನಂತರ ಇದೀಗ 'ಈ ಪಾದ ಪುಣ್ಯಪಾದ' ಎಂಬ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಈ ಬಾರಿ ಅವರು ಈ ಚಿತ್ರದಲ್ಲಿ ಆನೆ ಕಾಲು ರೋಗಿಯ ಕಥೆ ಹೇಳುವುದಕ್ಕೆ ಹೊರಟಿದ್ದಾರೆ.

"ಪೂರ್ಣಚಂದ್ರ ಫಿಲಂಸ್" ನಿರ್ಮಾಣ ಸಂಸ್ಥೆಯ ಜೊತೆಗೆ ಸಹ ನಿರ್ಮಾಪಕರಾಗಿ "ಸನ್ನಿ" ಯವರು ಕೈ ಜೋಡಿಸಿದ್ದಾರೆ. ಮುಖ್ಯ ಪಾತ್ರದಲ್ಲಿ 'ಆಟೋ ನಾಗರಾಜ್' ಅಭಿನಯಿಸಿದ್ದಾರೆ.

ಉಳಿದಂತೆ ರಶ್ಮಿ ಮೈಸೂರ್, ಚೈತ್ರ, ಜೈ ಶೆಟ್ಟಿ, ಬಲರಾಜ್ ವಾಡಿ, ಪ್ರಮೀಳಾ ಸುಬ್ರಮಣ್ಯ, ಬೇಬಿ ರಿಧಿ ಇನ್ನು ಮುಂತಾದವರು ಅಭಿನಯಿಸಿದ್ದಾರೆ. ರಾಜು ಹೆಮ್ಮಿಗೆಪುರ ರವರ ಛಾಯಾಗ್ರಹಣ, ಅನಂತ್ ಆರ್ಯನ್ ರವರ ಸಂಗೀತ, ದೀಪು ಸಿ ಎಸ್ ರವರ ಸಂಕಲನ, ಕೃಷ್ಣಮೂರ್ತಿಯವರ ಸಿಂಕ್ ಸೌಂಡ್ ಒಳಗೊಂಡಿದೆ. ಪತ್ರಿಕಾ ಸಂಪರ್ಕ ಸುಧೀಂದ್ರ ವೆಂಕಟೇಶ, ಡಾ.ಪ್ರಭು ಗಂಜಿಹಾಳ, ಡಾ.ವೀರೇಶ ಹಂಡಿಗಿ ಅವರದಿದೆ.

**-ಡಾ.ಪ್ರಭು ಗಂಜಿಹಾಳ**
**ಮೊ-9448775346**

## ನೀಲಕಂಠೇಶ್ವರ ಶಾಲೆಯ ವಿನೋದಗೆ ಶೇ. 94 ರಷ್ಟು


**ತೇರದಾಳ :** ಇಲ್ಲಿನ ರಬಕವಿ ರಸ್ತೆಯಲ್ಲಿರುವ ಕುರುಹಿನಶೆಟ್ಟಿ ನೀಲಕಂಠೇಶ್ವರ ಶಿಕ್ಷಣ ಸಂಸ್ಥೆಯ ಕನ್ನಡ ಮಾಧ್ಯಮ ಪ್ರೌಢಶಾಲೆಯ ವಿದ್ಯಾರ್ಥಿ ವಿನೋದ ಕಾಡಶೆಟ್ಟಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ589(94.24)ರಷ್ಟುಅಂಕ ಪಡೆದು ಶಾಲೆಗೆ ಪ್ರಥಮ ಸ್ಥಾನ ಪಡೆದುಕೊಂಡಿದ್ದಾನೆ. ಅಭಿನಂದನ ಗೌಡರ 556 (88.96) ದ್ವಿತೀಯ ಹಾಗೂ ಅಕ್ಷತಾ ಡಂಗಿ 550 (88%) ಅಂಕ ಪಡೆದು ತೃತೀಯ ಸ್ಥಾನ ಪಡೆದುಕೊಂಡಿದ್ದಾರೆಂದು ಶಾಲಾ ಪ್ರಕಟಣೆ ತಿಳಿಸಿದೆ.



## ಡಿ.ಕೆ. ಕೊಟ್ರಶೆಟ್ಟಿ ಆಂಗ್ಲ ಮಾಧ್ಯಮ ಶಾಲೆ ಉತ್ತಮ ಫಲಿತಾಂಶ

**ರಬಕವಿ:** ಇಲ್ಲಿಯ ಡಿ. ಕೆ. ಕೊಟ್ರಶೆಟ್ಟಿ ಆಂಗ್ಲ ಮಾಧ್ಯಮ ಶಾಲೆಯ 2024-25 ನೇ ಸಾಲಿನ ಎಸ್. ಎಸ್. ಎಲ್. ಸಿ. ಪರೀಕ್ಷೆಯ ಫಲಿತಾಂಶ ಉತ್ತಮವಾಗಿದೆ ಎಂದು ಸಂಸ್ಥೆಯ ಕಾರ್ಯದರ್ಶಿ ಗಿರೀಶ ಮುತ್ತೂರ ತಿಳಿಸಿದರು. ರಾಫಿಯಾ ನ. ಅವಟಿ 597 (95.52%) ಪ್ರಥಮ ಸ್ಥಾನ, ಸಿಂಧು ಸಿ. ಕಮದಿನ್ನಿ 593 (94.88%) ದ್ವಿತೀಯ ಸ್ಥಾನ, ಸಮರ್ಥ ಗಣಚಾರಿ, 566 (90.56%) ತೃತೀಯ ಸ್ಥಾನ, ಡಿಸ್ಟಿಂಕ್ಷನ್ ನಲ್ಲಿ 5 ಜನ ವಿದ್ಯಾರ್ಥಿಗಳು, ಫಸ್ಟ್ ಕ್ಲಾಸಿನಲ್ಲಿ 11 ಜನ ವಿದ್ಯಾರ್ಥಿಗಳು ಪಾಸಾಗಿದ್ದಾರೆ. ಇವರ ಸಾಧನೆಗೆ ಸಂಸ್ಥೆಯ ಎಲ್ಲ ಪದಾಧಿಕಾರಿಗಳು, ಸರ್ವ ಸದಸ್ಯರು ಹಾಗೂ ಸಿಬ್ಬಂದಿಗಳು ಹರ್ಷ ವ್ಯಕ್ತಪಡಿಸಿದ್ದಾರೆ.

## ಧರ್ಮ ರಕ್ಷಣೆಗೆ ಹುಟ್ಟಿ ಬಂದ ಅವತಾರ ಪುರುಷ ಶಂಕರಾಚಾರ್ಯರು: ಶಿರೀಷ ಜೋಷಿ



**ಬೆಳಗಾವಿ :** ಅಪೂರ್ವವಾಗಿರುವಂತಹ ತತ್ವಗಳನ್ನು ಬಾಲ್ಯದಲ್ಲೆ ಹೊಂದಿದ ವ್ಯಕ್ತಿ ಶಂಕರಾಚಾರ್ಯರು, ಧರ್ಮವನ್ನು ರಕ್ಷಿಸಲು ಅವತಾರ ಹೊತ್ತು ಬಂದಂತವರು, ಇವರ ಬಗ್ಗೆ ಆಳವಾದ ಅಧ್ಯಯನ ಮಾಡಿ ಅವರು ತೋರಿಸಿ ಕೊಟ್ಟ ಭಕ್ತಿ ಮಾರ್ಗದಲ್ಲಿ ನಾವು ಸಾಗಬೇಕು ಎಂದು ಸಾಹಿತಿಗಳಾದ ಶಿರೀಷ ಜೋಶಿ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮಹಾನಗರ ಪಾಲಿಕೆ ಇವರ ಸಂಯುಕ್ತ ಆಶ್ರಯದಲ್ಲಿ ಶುಕ್ರವಾರ (ಮೇ.2) ನಗರದ ಕಾವೇರಿ ನಗರದಲ್ಲಿನ ಮನೋಪ್ರಭಾ ಮಂಗಲ ಕಾರ್ಯಾಲಯದಲ್ಲಿ ನಡೆದ ಶ್ರೀ ಶಂಕರಾಚಾರ್ಯರ ಜಯಂತಿ ಉತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಧರ್ಮದ ರಕ್ಷಣೆಗಾಗಿ ಹುಟ್ಟಿ ಬಂದಂತಹ ಅವತಾರ ಪುರುಷ ಶಂಕರಾಚಾರ್ಯರು. ಅವರು ತಮ್ಮ ಚಿಕ್ಕ ವಯಸ್ಸಿನಲ್ಲಿ ನಾಲ್ಕು ದಿಕ್ಕುಗಳಲ್ಲಿ ಸಂಚರಿಸಿ ಸನಾತನ ಧರ್ಮ ರಕ್ಷಿಸುವ ಸಲುವಾಗಿ ನಾಲ್ಕು ಪೀಠಗಳನ್ನು ಸ್ಥಾಪಿಸಿ, ಆ ಪೀಠಗಳಿಗೆ ಸೂಕ್ತವಾದ ವ್ಯಕ್ತಿಗಳನ್ನು ನೇಮಿಸಿದರು ಎಂದು ತಿಳಿಸಿದರು.

ಶಂಕರಾಚಾರ್ಯರು ಭಕ್ತಿಗೆ ಹೆಚ್ಚು ಮಹತ್ವ ಕೊಡುತ್ತಿದ್ದರು, "ಆಡಂಭರದ ಪೂಜೆಗಿಂತ ಭಕ್ತಿ ಪೂಜೆ ಶ್ರೇಷ್ಠ" ಎಂದು ಶಂಕರಾಚಾರ್ಯರು ಹೇಳಿದ್ದಾರೆ. ಅವರ ತತ್ವ ಸಿದ್ದಾಂತಗಳು ಕೇವಲ ಹಿಂದು ಧರ್ಮಕ್ಕೆ ಮಾತ್ರ ಸೀಮಿತ ಇರಲಿಲ್ಲಾ, ಬೇರೆ ಧರ್ಮದವರಿಗೂ ಸಹಿತ ಮಾದರಿಯಾಗಿದ್ದವು, ಎಲ್ಲರ ಸುಖದ ಜೀವನ ನಡೆಸಲು ಇದ್ದಂತಹ ತತ್ವಗಳು ಇವರದ್ದಾಗಿದ್ದವು ಎಂದು ಸಾಹಿತಿಗಳಾದ ಶಿರೀಷ ಜೋಶಿ ಅವರು ಹೇಳಿದರು.

ಮಹಾನಗರ ಪಾಲಿಕೆ ಮಹಾಪೌರರಾದ ಮಂಗೇಶ ಪವಾರ ಅವರು ಕಾರ್ಯಕ್ರಮ ಉದ್ಘಾಟಿಸಿದರು. ಉಪ ಮಹಾಪೌರರಾದ ವಾಣಿ ವಿಲಾಸ ಜೋಶಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉಪ ನಿರ್ದೇಶಕಿ ವಿದ್ಯಾವತಿ ಭಜಂತ್ರಿ, ಮಾಲತೇಶ ಪಾಟೀಲ, ಮುತಾಲಿಕ ದೇಸಾಯಿ, ರಾಕೇಶ ದೇಶಪಾಂಡೆ, ಜಿ, ಆರ್, ಕುಲಕರ್ಣಿ, ವೆಂಕಟೇಶ ದೇಶಪಾಂಡೆ, ಅನಂತ ಚಿಂಚಣಿ ಸಮಾಜದ ಗಣ್ಯರು, ಮುಖಂಡರುಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಅರ್ಜಿ ಆಹ್ವಾನ

**ಬೆಳಗಾವಿ :** ಸ್ವಚ್ಛ ಭಾರತ ಅಭಿಯಾನದ ಯೋಜನೆ 2.0 ಅಡಿಯಲ್ಲಿ ಮೂರು ವರ್ಷಗಳ ಅವಧಿಗಾಗಿ ಮಾಹಿತಿ, ಶಿಕ್ಷಣ ಮತ್ತು ಸಂಪರ್ಕ ಚಟುವಟಿಕೆಗಳನ್ನು ಕೈಗೊಳ್ಳಲು ಮುನವಳ್ಳಿ ಪುರಸಭೆ ವ್ಯಾಪ್ತಿಯ ಸ್ವ-ಸಹಾಯ ಸಂಘದ ಸದಸ್ಯರುಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಅಭ್ಯರ್ಥಿಗಳು ಕನಿಷ್ಠ 10 ನೇ ತರಗತಿ ಪಾಸಾಗಿದ್ದು, ಕನ್ನಡ ಓದಲು ಮತ್ತು ಬರೆಯಲು ಸಾಮರ್ಥ್ಯ ಇರುವವರಿಗೆ, ಗಣಕ ಯಂತ್ರದ ಜ್ಞಾನ ಹೊಂದಿರುವ ಹಾಗೂ ಈ ಹಿಂದೆ ನಗರ ಮತ್ತು ಗ್ರಾಮಗಳಲ್ಲಿ ಕಾರ್ಯನಿರ್ವಹಿಸಿದ ಅನುಭವ ಹೊಂದಿದವರಿಗೆ ಮೊದಲ ಆದ್ಯತೆ ನೀಡಲಾಗುವುದು.

ಆಸಕ್ತ ಅಭ್ಯರ್ಥಿಗಳು ಮೇ 15, 2025 ರಂದು ಸಂಜೆ 5 ಗಂಟೆಯ ಒಳಗಾಗಿ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಅರ್ಜಿ ಹಾಗೂ ಹೆಚ್ಚಿನ ಮಾಹಿತಿಗಾಗಿ ಪುರಸಭೆ ಕಾರ್ಯಾಲಯದಿಂದ ಪಡೆದುಕೊಳ್ಳಬಹುದಾಗಿದೆ ಎಂದು ಮುನವಳ್ಳಿ ಪುರಸಭೆ ಮುಖ್ಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕಿಯರ ಹುದ್ದೆಗೆ ಅರ್ಜಿ ಆಹ್ವಾನ

**ಬೆಳಗಾವಿ :** ಶಿಶು ಅಭಿವೃದ್ಧಿ ಯೋಜನೆ ಖಾನಾಪೂರ ವ್ಯಾಪ್ತಿಯಲ್ಲಿ ಖಾಲಿ ಇರುವ 8 ಅಂಗನವಾಡಿ ಕಾರ್ಯಕರ್ತೆಯರ ಹಾಗೂ 35 ಸಹಾಯಕಿಯರ ಹುದ್ದೆಗಳಿಗೆ ಅರ್ಹ ಮಹಿಳಾ ಮತ್ತು ಲಿಂಗತ್ವ ಅಲ್ಪಸಂಖ್ಯಾತ ಮಹಿಳಾ ಅಭ್ಯರ್ಥಿಗಳಿಂದ ಆನ್‌ಲೈನ ಮೂಲಕ ಅರ್ಜಿ ಅಹ್ವಾನಿಸಲಾಗಿದೆ. ಅರ್ಜಿಗಳನ್ನು ವೆಬ್‌ಸೈಟ್ https://karnemakaone.kar.nic.in/abcd/ ಮೂಲಕ ಮೇ. 16, 2025 ರ ಒಳಗಾಗಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಂಬಂಧಿಸಿದ ತಾಲೂಕಿನ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳನ್ನು ದೂರವಾಣಿ ಸಂಖ್ಯೆ: 08336-222501 ಗೆ ಸಂಪರ್ಕಿಸಬಹುದಾಗಿದೆ ಎಂದು ಖಾನಾಪೂರ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕೆರೆ ತುಂಬಿಸುವ ಯೋಜನೆ ಪ್ರಗತಿ ಪರಿಶೀಲಿಸಿದ ಸಚಿವೆ ಲಕ್ಷ್ಮೀ ಹೆಬ್ಬಾಳಕರ್



**ಬೆಳಗಾವಿ :** ಬೆಳಗಾವಿ ಗ್ರಾಮೀಣ ಕ್ಷೇತ್ರದ ಸಂತಿಬಸ್ತವಾಡ ಹಾಗೂ ಉಚಗಾಂವ ಭಾಗದ ಒಟ್ಟು 20 ಕೆರೆಗಳನ್ನು ತುಂಬಿಸುವ ಯೋಜನೆಗೆ ಸರ್ಕಾರದಿಂದ 2.39 ಕೋಟಿ ರೂ. ಮಂಜೂರಾಗಿದ್ದು, ಈ ಹಿನ್ನೆಲೆಯಲ್ಲಿಉಚಗಾಂವಭಾಗದ ಬಸುರ್ತೆಯಲ್ಲಿ ನಿರ್ಮಾಣ ಹಂತದಲ್ಲಿರುವ ಬೃಹತ್ ನೀರು ಸಂಗ್ರಹಣಾ ಘಟಕಕ್ಕೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಭೇಟಿ ನೀಡಿ ಪ್ರಗತಿ ಪರಿಶೀಲನೆ ನಡೆಸಿದರು.

ಈ ವೇಳೆ ಮಾತನಾಡಿದ ಸಚಿವರು, ಸಂತಿ ಬಸ್ತವಾಡ ಹಾಗೂ ಉಚಗಾಂವ ಸುತ್ತಮುತ್ತಲಿನ ಗ್ರಾಮಗಳರೈತರಅನೂಕೂಲಕ್ಕಾಗಿ ಈ ಬೃಹತ್ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ.

ಈ ಯೋಜನೆಯಿಂದ ರೈತರ ಹೊಲಗದ್ದೆಗಳಿಗೆ ನೀರು ಸಿಗಲಿದೆ. ರೈತರ ಹಾಗೂ ಗ್ರಾಮೀಣ ಭಾಗದ ಆರ್ಥಿಕತೆ ದೃಷ್ಟಿಯಿಂದ ಈ ಯೋಜನೆ ಕ್ಷೇತ್ರದಲ್ಲಿ ಅತ್ಯಂತ ಪ್ರಮುಖವಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಗುತ್ತಿಗೆದಾರರಾದ ನರೇಂದ್ರ ರೆಡ್ಡಿ, ಯುವರಾಜ ಕದಂ, ಯುವ ಕಾಂಗ್ರೆಸ್ ಮುಖಂಡ ಮೃಣಾಲ್ ಹೆಬ್ಬಾಳಕರ್ ಹಾಗೂ ಸ್ಥಳೀಯರು ಉಪಸ್ಥಿತರಿದ್ದರು.

**ಜಿಲ್ಲಾ ಮಟ್ಟದ ಬೇಸಿಗೆ ಶಿಬಿರ**

## ಮಕ್ಕಳಿಗೆ ಸೃಜನಾತ್ಮಕ, ಕ್ರಿಯಾಶೀಲ ಚಟುವಟಿಕೆಗಳು ಅವಶ್ಯಕ: ನಾಗರಾಜ್. ಆರ್.

**ಬೆಳಗಾವಿ :** ರಾಜ್ಯ ಬಾಲಭವನ ಸೊಸೈಟಿ ಬೆಂಗಳೂರು, ಜಿಲ್ಲಾ ಪಂಚಾಯತ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಬಾಲಭವನ ಸಮಿತಿ ಬೆಳಗಾವಿ ಹಾಗೂ ಮಹಿಳಾ ಕಲ್ಯಾಣ ಸಂಸ್ಥೆ ಬೆಳಗಾವಿ ಇವರ ಸಂಯುಕ್ತಾಶ್ರಯದಲ್ಲಿ ಮಹಾಂತೇಶ ನಗರದ ಭಾರತ್ ಕಾಲೋನಿಯಲ್ಲಿ 5 ರಿಂದ 16 ವರ್ಷದೊಳಗಿನ ಮಕ್ಕಳಿಗಾಗಿ 2025-26 ನೇ ಸಾಲಿನ ಜಿಲ್ಲಾ ಮಟ್ಟದ ಬೇಸಿಗೆ ಶಿಬಿರ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.



ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ನಾಗರಾಜ್. ಆರ್, ಮಕ್ಕಳು ವರ್ಷವಿಡಿ ಓದು ಬರಹದಲ್ಲಿ ಹೆಚ್ಚಾಗಿ ಸಮಯ ಕಳೆಯುತ್ತಾರೆ. ಬೇಸಿಗೆ ರಜಾ ದಿನಗಳು ಬಂದವೆಂದರೆ ಅವರಿಗೆ ಖುಷಿಯಾಗುವಂತದು, ರಜಾ ದಿನಗಳಲ್ಲಿ ಮನರಂಜನೆಯೊಂದಿಗೆ ಪಠ್ಯೇತರ ಚಟುವಟಿಕೆಗಳ ಕಲಿಕೆಗಾಗಿ ಹಾಗೂ ಸೃಜನಾತ್ಮಕ ಮತ್ತು ಕ್ರಿಯಾಶೀಲ ಚಟುವಟಿಕೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಲು ಬೇಸಿಗೆ ಶಿಬಿರಗಳು ಬಹಳ ಸಹಾಯಕಾರಿಯಾಗಿವೆ. ಶಿಬಿರದಲ್ಲಿ ಯೋಗ, ಚಿತ್ರಕಲೆ, ಕರಕುಶಲ ಕಲೆ, ಸಂಗೀತ, ನೃತ್ಯ, ಮುಂತಾದ ಸೃಜನಾತ್ಮಕ ಚಟುವಟಿಕೆಗಳ ಬಗ್ಗೆ ತರಗತಿ ನಡೆಸಲಾಗುವುದು, ಮಕ್ಕಳು ಶಿಬಿರದ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಬೆಳಗಾವಿ ಮಹಿಳಾ ಕಲ್ಯಾಣ ಸಂಸ್ಥೆ ಸಂಸ್ಥಾಪಕರಾದ ಎಮ್.ಎಸ್ ಚೌಗಲಾ, ಮಾತನಾಡಿ ಬೇಸಿಗೆಯ ರಜಾ ದಿನಗಳನ್ನು ವಿನೋದದಿಂದ ಕಳೆಯಲು, ಮಕ್ಕಳ ಪ್ರತಿಭೆಯನ್ನು ಹೊರತರಲು ಶಿಬಿರದಂತಹ ಆಯೋಜನೆಗಳು ಬಹುಮುಖ್ಯ ಪಾತ್ರವಹಿಸುತ್ತವೆ. ಶಿಬಿರದಲ್ಲಿ ನಡೆಸಲಾಗುವ ಚಟುವಟಿಕೆಗಳು ಮಕ್ಕಳ ಸೃಜನಾತ್ಮಕತೆ, ಕ್ರಿಯಾಶೀಲತೆ ಹಾಗೂ ನೈತಿಕ ಮೌಲ್ಯಗಳನ್ನು ಬೆಳೆಸುವಂತವಾಗಿವೆ ಎಂದು ಹೇಳಿದರು.

ಬೇಸಿಗೆ ಶಿಬಿರದಲ್ಲಿ ಸುಮಾರು 100 ಕ್ಕಿಂತ ಹೆಚ್ಚು ಮಕ್ಕಳು ಭಾಗಿಯಾಗಿದ್ದರು. ಕಾರ್ಯಕ್ರಮದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿಗಳಾದ ಚಂದ್ರಶೇಖರ ಸುಖಸಾರೆ (ಪ್ರಭಾರ), ಬೆಳಗಾವಿ ನಗರ ಶಿಶು ಅಭಿವೃದ್ಧಿ ಯೋಜನಾಧಿಕಾರಿ ರಾಮಮೂರ್ತಿ ಕೆ. ವಿ, ಮಹಿಳಾ ಕಲ್ಯಾಣ ಸಂಸ್ಥೆ, ಕಾರ್ಯದರ್ಶಿ ವೈಜಯಂತಿ ಚೌಗಲಾ, ಉಪಸ್ಥಿತರಿದ್ದರು.

## 2024ನೇ ಸಾಲಿನ ಕಾದಂಬರಿ ಸಾಹಿತ್ಯ ಪ್ರಶಸ್ತಿಗೆ ಸಾಹಿತಿ ಪ್ರೊ ಬರಗೂರು ರಾಮಚಂದ್ರಪ್ಪ ಆಯ್ಕೆ

**ಬೆಳಗಾವಿ :** ಬೆಳಗಾವಿಯ ಬಸವರಾಜ ಕಟ್ಟೀಮನಿ ಪ್ರತಿಷ್ಠಾನವು ಜೀವಮಾನ ಸಾಧನೆಗಾಗಿ ಕೊಡಮಾಡುವ 2024ನೇ ಸಾಲಿನ ಕಾದಂಬರಿ ಸಾಹಿತ್ಯ ಪ್ರಶಸ್ತಿಗೆ ನಾಡಿನ ಪ್ರಸಿದ್ಧ ಕಥೆ, ಕಾದಂಬರಿಕಾರ ಹಾಗೂ ಸಂಸ್ಕೃತಿ ಚಿಂತಕರಾದ ಸಾಹಿತಿ ಪ್ರೊ ಬರಗೂರು ರಾಮಚಂದ್ರಪ್ಪ ಅವರು ಆಯ್ಕೆಯಾಗಿದ್ದಾರೆ.



ತುಮಕೂರು ಜಿಲ್ಲೆಯ ಶಿರಾ ತಾಲೂಕಿನ ಬರಗೂರಿನವರಾದ ನಾಡೋಜ ಬರಗೂರು ರಾಮಚಂದ್ರಪ್ಪ ಅವರು, ಬಸವರಾಜ ಕಟ್ಟೀಮನಿ ಅವರ ತತ್ವ-ಆದರ್ಶಗಳಂತೆ ಬರೆಯುತ್ತ, ಬದುಕು ನಡೆಸಿದವರು.

ಅವರು ಈವರೆಗೆ ಒಂದು ಊರಿನ ಕಥೆ, ಮರಣ ದಂಡನೆ, ಬೆಂಕಿ, ಗಾಜಿನ ಮನೆ, ಸ್ವಪ್ನಮಂಟಪ, ಶಬರಿ, ಕಸ್ತೂರಬಾತ/ಗಾಂಧಿ ಸೇರಿದಂತೆ 13 ಸತ್ವಯುತ ಕಾದಂಬರಿಗಳನ್ನು ರಚಿಸುವುದರ ಮೂಲಕ ಕಾದಂಬರಿ ಕ್ಷೇತ್ರವನ್ನು ಸಮೃದ್ಧಗೊಳಿಸಿದ್ದಾರೆ. ಓದುಗರ ಮತ್ತು ವಿಮರ್ಶಕರ ಮನ್ನಣೆಗೆ ಪಾತ್ರರಾದವರು.

ಬಸವರಾಜ ಕಟ್ಟೀಮನಿ ಅವರ ಹೆಸರಿನಲ್ಲಿ ಕೊಡುವ ಈ ಪ್ರಶಸ್ತಿಯು ರೂ.50,000/- ನಗದು ಹಾಗೂ ಪ್ರಶಸ್ತಿ ಫಲಕವನ್ನು ಒಳಗೊಂಡಿದ್ದು, ರವಿವಾರ (ಮೇ.25) ಪ್ರಶಸ್ತಿ ಪ್ರಧಾನ ಸಮಾರಂಭವನ್ನು ಹಮ್ಮಿಕೊಳ್ಳಲಾಗುವುದು ಎಂದು ಬಸವರಾಜ ಕಟ್ಟೀಮನಿ ಪ್ರತಿಷ್ಠಾನದ ಸದಸ್ಯ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರವಿಚಂದ್ರಗೆ ರಂಗಭೂಮಿ ರತ್ನ ಸಿರಿ ಪ್ರಶಸ್ತಿಗೆ ಆಯ್ಕೆ



**ತಾಳಿಕೋಟೆ :** ಪಟ್ಟಣದ ಶ್ರೀ ವಿರಕ್ತೇಶ್ವರ ಭರತನಾಟ್ಯ ತರಬೇತಿ ಸಂಸ್ಥೆಯವತಿಂದ ಕೊಡಮಾಡಲಾದ ರಂಗಭೂಮಿ ರತ್ನ ಸಿರಿ ಪ್ರಶಸ್ತಿಗೆ ತಾಳಿಕೋಟೆಯ ರಂಗಭೂಮಿ ಕಲಾವಿದ ರವಿಚಂದ್ರ ಸೋಮಪ್ಪ ವಾಲಿಕಾರ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಸಂಸ್ಥೆಯ ಅಧ್ಯಕ್ಷ ವಿನೋದಕುಮಾರ ಚಿಕ್ಕಮಠ ಅವರು ತಿಳಿಸಿದ್ದಾರೆ.

ರವಿಚಂದ್ರ ವಾಲಿಕಾರ ಅವರು ರಂಗಭೂಮಿ ಕಲಾವಿದರಾಗಿ ಅನೇಕ ನಾಟಕಗಳಲ್ಲಿ ತಮ್ಮ ಕಲೆಯನ್ನು ಬಿತ್ತರಿಸಿ ಜನಮನಗೆದ್ದಿದ್ದು ಅವರ ಅನುಪಮ ಸೇವೆಯನ್ನು ಗುರುತಿಸಿ ಸದರಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದ್ದು ಮೇ. 3 ರಂದು ತಾಳಿಕೊಟೆ ಪಟ್ಟಣದ ಶ್ರೀ ವಿಠ್ಠಲ ಮಂದಿರದ ಸಭಾ ಭವನದಲ್ಲಿ ನಡೆಯಲಿರುವ ಶ್ರೀ ವಿರಕ್ತೇಶ್ವರ ಭರತನಾಟ್ಯ

ತರಬೇತಿ ಸಂಸ್ಥೆಯ ವಾರ್ಷಿಕೋತ್ಸವ ಹಾಗೂ 2 ತಿಂಗಳ ಉಚಿತ ನೃತ್ಯ ತರಬೇತಿ ಸಮಾರೋಪ ಸಮಾರಂಭದಲ್ಲಿ ಈ ಪ್ರಶಸ್ತಿಯನ್ನು ಪ್ರಧಾನ ಮಾಡಲಾಗುವದೆಂದು ಅವರು ತಿಳಿಸಿದ್ದಾರೆ.

# ಶಿಕ್ಷಕ ದಂಪತಿ ಪುತ್ರ ರಾಜ್ಯಕ್ಕೆ ಟಾಪರ್

**ವಿಜಯಪುರ :** ಜಿಲ್ಲೆಯ ಮುದ್ದೇಬಿಹಾಳ ತಾಲೂಕು ನಾಗರಬೆಟ್ಟ ಗುಡ್ಡದ ಹತ್ತಿರ ಇರುವ ಆಕ್ಸಪರ್ಡ ಪಾಟೀಲ್ಸ್ ಸಮೂಹ ಶಿಕ್ಷಣ ಸಂಸ್ಥೆಯ ಆಕ್ಸಪರ್ಡ್ ಪಾಟೀಲ್ಸ್ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ವಿದ್ಯಾರ್ಥಿ ಅಕೀಲ ಅಹ್ಮದ ನದಾಫ 625 ಕ್ಕೆ 625 ಅಂಕ ಪಡೆದು ಆಂಗ್ಲ ಮಾಧ್ಯಮ ವಿಭಾಗದಲ್ಲಿ ರಾಜ್ಯಕ್ಕೆ ಮೊದಲ ಸ್ಥಾನ ಪಡೆಯುವ ಮೂಲಕ ಜಿಲ್ಲೆಗೆ ಕೀರ್ತಿ ತಂದಿದ್ದಾರೆ.

ಇವರತಂದೆನಾಸೀರ್‌ಅಲಿನದಾಫಅವರುಮಾದಿನಾಳ ಸರ್ಕಾರಿ ಪ್ರೌಢಶಾಲೆಯಲ್ಲಿ ಶಿಕ್ಷಕರಾಗಿದ್ದರೆ ತಾಯಿ ಶೈನಾಜಬೇಗಂ ಅವರು ಮುದ್ದೇಬಿಹಾಳ ಕನ್ನಡ ಬಾಲಕಿಯರ ಪ್ರಾಥಮಿಕ ಶಾಲೆಯ ಶಿಕ್ಷಕರಾಗಿದ್ದಾರೆ.

ಅಕೀಲನು ಇಲ್ಲಿನ ವಿದ್ಯಾ ಸ್ಫೂರ್ತಿ ಪ್ರಾಥಮಿಕ ಶಾಲೆಯಲ್ಲಿ 5ನೇ ತರಗತಿ, ಆಲಮಟ್ಟಿಯ ಜವಾಹರ ನವೋದಯದಲ್ಲಿ 6–7, ನಾಗರಬೆಟ್ಟದಲ್ಲಿ 8–10 ನೇ ತರಗತಿ ಅಭ್ಯಾಸ ಮಾಡಿದ್ದಾನೆ. ನದಾಫ ಕುಟುಂಬದ ಏಕಮಾತ್ರ ಪುತ್ರನಾಗಿರುವ ಅಕೀಲ ಅಹ್ಮದ ಸಾಧನೆ ಬಹಳ ಕಷ್ಟಕರ ದಾರಿಯನ್ನು ಕ್ರಮಿಸಿ ಮಾಡಿದ್ದಾಗಿದೆ ಎಂದು ಆತನ ತಂದೆ ಹರ್ಷಿಸಿದ್ದಾರೆ.

ನಮ್ಮಶಾಲೆಯವಿದ್ಯಾರ್ಥಿರಾಜ್ಯಕ್ಕೆಮೊದಲಿಗನಾಗಿದ್ದು ಕೀರ್ತಿ ಹೆಚ್ಚಿಸಿದಂತಾಗಿದೆ ಎಂದು ಆಕ್ಸಫರ್ಡ ಸಂಸ್ಥೆ ಚೇರ್ಮನ್ ಎಂ.ಎಸ್.ಪಾಟೀಲ, ಆಡಳಿತಾಧಿಕಾರಿ ಅಮಿತಗೌಡ ಪಾಟೀಲ,ಮುಖ್ಯಾಧ್ಯಾಪಕ ಇಸ್ಮಾಯಿಲ್ ಮನಿಯಾರ ಸಂತಸ ಹಂಚಿಕೊಂಡಿದ್ದಾರೆ.

# ಎಸ್ಸೆಸ್ಸೆಲ್ಸಿ ಫಲಿತಾಂಶ: ಚೇತನಾ ಆಂಗ್ಲ ಮಾಧ್ಯಮ ಶಾಲೆ ಅತ್ಯುತ್ತಮ ಸಾಧನೆ



**ವಿಜಯಪುರ :** ನಗರದ ದರ್ಗಾ ರಸ್ತೆಯ ಮಾನಸ ರೆಸಿಡೆನ್ಸಿಯ ಹತ್ತಿರ ಇರುವ ಚೇತನಾ ಶಿಕ್ಷಣ ಸಂಸ್ಥೆಯ ಚೇತನಾ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ವಿದ್ಯಾರ್ಥಿಗಳು ಪ್ರಸಕ್ತ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಸಾಧನೆ ಮಾಡಿ ಶಾಲೆಗೆ ಕೀರ್ತಿ ತಂದಿದ್ದಾರೆ.

ವಿದ್ಯಾರ್ಥಿಗಳಾದ ಆಕಾಶ ಲಮಾಣಿ ಶೇ.96ರಷ್ಟು ಅಂಕಗಳನ್ನು ಪಡೆದು ಶಾಲೆಗೆ ಪ್ರಥಮ, ಶ್ರೇಯಸ್ ಮಲಘಾಣ ಶೇ.95ರಷ್ಟು ಅಂಕಗಳನ್ನು ಪಡೆದು ದ್ವಿತೀಯ ಸ್ಥಾನ, ಸಾಕ್ಷಿ ಬಬಲೇಶ್ವರ ಶೇ.94ರಷ್ಟು ಅಂಕಗಳನ್ನು ಪಡೆದು ತೃತೀಯ ಸ್ಥಾನ, ನವ್ಯಾಶ್ರೀ ಪತ್ತಾರ ಶೇ.93ರಷ್ಟು ಹಾಗೂ ಆಯುಶ್ ಲಂಬು ಶೇ.93ರಷ್ಟು ಅಂಕಗಳನ್ನು ಪಡೆದು ಅತ್ಯುತ್ತಮ ಸಾಧನೆ ಮಾಡಿದ್ದಾರೆ.

30 ಡಿಸ್ಟಿಂಕ್ಷನ್, 20 ಪ್ರಥಮ ಸ್ಥಾನವನ್ನು ವಿದ್ಯಾರ್ಥಿಗಳು ಪಡೆದುಕೊಂಡಿದ್ದಾರೆ. 4 ವಿದ್ಯಾರ್ಥಿಗಳು ಹಿಂದಿ ಭಾಷೆಯಲ್ಲಿ 100 ಕ್ಕೆ 100 ರಷ್ಟು ಅಂಕಗಳನ್ನು ಪಡೆದುಕೊಂಡಿದ್ದಾರೆ.

ವಿದ್ಯಾರ್ಥಿಗಳ ಈ ಸಾಧನೆಗೆ ಸಂಸ್ಥೆಯ ಅಧ್ಯಕ್ಷೆ ರಾಜಶ್ರೀ ಜುಗತಿ, ಉಪಾಧ್ಯಕ್ಷ ರೋಹಿತ್ ಜುಗತಿ, ನಿರ್ದೇಶಕ ಡಾ, ನಾಗರಾಜ ಹೇರಲಗಿ, ಸಹಾಯಕ ಆಡಳಿತ ಅಧಿಕಾರಿ ಪ್ರಮೋದ ಕುಲಕರ್ಣಿ, ಮುಖ್ಯೋಪಾಧ್ಯಾಯ ಪ್ರೊ. ಎ.ಎಚ್. ಕೊಳಮಲಿ, ಸಿ.ಎಸ್. ವಾಲಿ,

ಸಾಗರ ಕುಲಕರ್ಣಿ ಹಾಗೂ ಸಿಬ್ಬಂದಿ ವರ್ಗದವರು ಹರ್ಷ ವ್ಯಕ್ತಪಡಿಸಿದ್ದಾರೆ.

# ವಿಶೇಷಚೇತನ–ಹಿರಿಯ ನಾಗರಿಕರಿಗೆ ಉಚಿತ ಸಾಧನ–ಸಲಕರಣೆ ವಿತರಣೆ



**ವಿಜಯಪುರ :** ವಿಶೇಷಚೇತನರು ಕೂಡ ಸಾಮಾನ್ಯರಂತೆ ಬದುಕುವ ಬಯಕೆಯಿರುತ್ತದೆಎಂಬುದನ್ನುಸಮಾಜದ ಇತರರು ಅರಿತು ಅವರ ಬೆಳವಣಿಗೆಗೆ ಸಹಕರಿಸಬೇಕು. ಈ ನಿಟ್ಟಿನಲ್ಲಿ ಸರ್ಕಾರ ವಿಶೇಷಚೇತನರ ಸಬಲೀಕರಣಕ್ಕಾಗಿ ಉಚಿತವಾಗಿ ಸಾಧನ ಸಲಕರಣೆಯನ್ನು ನೀಡಲಾಗುತ್ತಿದೆ ಎಂದು ಸಂಸದ ರಮೇಶ ಜಿಗಜೀಣಗಿ ಹೇಳಿದರು.

ಮಂಗಳವಾರ ನಗರದ ಕಂದಗಲ್ ಶ್ರೀ ಹನುಮಂತರಾಯ್ ರಂಗ ಮಂದಿರದಲ್ಲಿ ಭಾರತ ಸರ್ಕಾರ, ಸಾಮಾಜಿಕ ನ್ಯಾಯ ಹಾಗೂಸಬಲೀಕರಣಇಲಾಖೆ,ಅಲಿಂಕೋ, ಜಿಲ್ಲಾಡಳಿತ, ಜಿಲ್ಲಾಪಂಚಾಯತಗಳ ಸಂಯುಕ್ತಾಶ್ರಯದಲ್ಲಿ ವಿಶೇಷಚೇತನ ಹಾಗೂ ಹಿರಿಯ ನಾಗರಿಕರಿಗೆ ಉಚಿತ ಸಾಧನ ಸಲಕರಣೆಗಳ ವಿತರಿಸುವ ಭಾರತ ಸರ್ಕಾರದ ಅಡಿಪ್ ಯೋಜನೆ ಹಾಗೂ ರಾಷ್ಟ್ರೀಯ ವಯೋಶ್ರೀ ಯೋಜನೆಯಡಿ ಸಾಮಾಜಿಕ ಅಧಿಕಾರಿತ ಶಿವಿರ್ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಿಶೇಷಚೇತನರಿಗಾಗಿ ಸಾಧನ ಸಲಕರಣೆಗಳನ್ನು ವಿತರಿಸಲಾಗುತ್ತಿದ್ದು ತಾವುಗಳು ಮಾತ್ರ ಸಮರ್ಪಕವಾಗಿ ಉಪಯೋಗಿಸುವಂತಾಗಬೇಕು. ಅಧಿಕಾರಿಗಳು ಕೂಡ ಅರ್ಹತೆ ಹೊಂದಿದವರಿಗೆ ಮಾತ್ರ ಸಾಧನ ಸಲಕರಣಗಳು ದೊರೆಯುವಂತೆ ಕ್ರಮ ವಹಿಸಬೇಕು. ಯೋಜನೆಗಳ ಫಲಾನುಭವಿಗಳುಸಾಧನಸಲಕರಣೆಗಳನ್ನು ಸದುಪಯೋಗ ಪಡೆದುಕೊಂಡು ಮುಖ್ಯ ವಾಹಿನಿಗೆ ಬರುವಂತೆ ಕಿವಿಮಾತು ಹೇಳಿದರು.

ಜಿಲ್ಲಾಧಿಕಾರಿ ಟಿ.ಭೂಬಾಲನ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ವಿಶೇಷ ಚೇತನರಿಗೆ ಇರುವ ಸಮಸ್ಯೆಗಳನ್ನು ಗುರುತಿಸಿ ಅಗತ್ಯವಾದ ಸಾಧನ ಸಲಕರಣೆಗಳನ್ನು ನೀಡಿ ಮುಖ್ಯವಾಹಿನಿಗೆ ತರುವ ನಿಟ್ಟಿನಲ್ಲಿ ಈ ಯೋಜನೆಗಳು ಫಲಾನುಭವಿಗಳಿಗೆ ಸಹಕಾರಿಯಾಗಿವೆ.

ಜಿಲ್ಲೆಯಲ್ಲಿ ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ವತಿಯಿಂದ ಬಡ ವಿಶೇಷಚೇತನ ಮಕ್ಕಳಿಗಾಗಿ ವಿಶೇಷ ಶಾಲೆ ನಿರ್ಮಾಣ ಹಂತದಲ್ಲಿದ್ದು ಮುಂದಿನ ವರ್ಷ ಕಾರ್ಯಾರಂಭ ಮಾಡಲಿದೆ. ಇಲ್ಲಿ ವಿಶೇಷ ಚೇತನ ಮಕ್ಕಳಿಗೆ ಸಂಪೂರ್ಣವಾಗಿ ಉಚಿತ ಶಿಕ್ಷಣ ನೀಡಲಾಗುವುದು ಜಿಲ್ಲೆಯಲ್ಲಿರುವ ವಿಶೇಷ ಚೇತನ ಮಕ್ಕಳು ಇದರ ಸದುಪಯೋಗ ಪಡೆದುಕೊಳ್ಳುವಂತೆ ಅವರು ತಿಳಿಸಿದರು.

ವಿಶೇಷಚೇತನರ ಇಲಾಖೆಯ ಸಹಾಯಕ ನಿರ್ದೇಶಕಿ ಸವಿತಾ ಕಾಳೆ ಮಾತನಾಡಿ, ವಿಜಯಪುರ ಹಾಗೂ ಬಸವನ ಬಾಗೇವಾಡಿ ತಾಲೂಕಿನ ಫಲಾನುಭವಿಗಳಿಗೆ ಸಾಂಕೇತಿಕವಾಗಿ ಸಾಧನ ಸಲಕರಣೆಗಳನ್ನು ವಿತರಿಸಲಾಗಿದ್ದು, ಮುಂದಿನ ದಿನಗಳಲ್ಲಿ ಜಿಲ್ಲೆಯ ಎಲ್ಲ ತಾಲೂಕುಗಳಲ್ಲಿ ಅರ್ಹ ವಿಶೇಷಚೇತನರಿಗೆ ಸಾಧನ ಸಲಕರಣೆಗಳನ್ನು ವಿತರಿಸಲಾಗುವುದು ಎಂದು ಅವರು ಹೇಳಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತಿ ಮುಖ್ಯ ಯೋಜನಾಧಿಕಾರಿ ನಿಂಗಪ್ಪ ಗೋಠೆ, ಮಹಿಳಾ ಮತ್ತು ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಕೆ.ಕೆ. ಚವ್ಹಾಣ, ಅಲಿಂಕೋ ಡೆಪ್ಯೂಟಿ ಮ್ಯಾನೇಜರ ಶಿವುಕುಮಾರ, ವಿಶೇಷ ಚೇತನರ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸ್ವಯಂ ಸಂಸ್ಥೆಗಳು, ಪಾಲಕ ಪೊ?ಷಕರ ಒಕ್ಕೂಟದ ಪದಾಧಿಕಾರಿಗಳು ಹಾಗೂ ಇತರರು ಉಪಸ್ಥಿತರಿದ್ದರು.

# ಒಳಮೀಸಲಾತಿ ಜಾರಿಗಾಗಿ ರಾಜ್ಯಾದ್ಯಂತ ಕ್ರಾಂತಿಕಾರಿ ರಥಯಾತ್ರೆ: ಭಾಸ್ಕರ್ ಪ್ರಸಾದ್ಕ



**ಚಿತ್ತಾಪುರ :** ಒಳಮೀಸಲಾತಿ ಜಾರಿಗಾಗಿ ಸರ್ಕಾರಕ್ಕೆ ಜೂನ್ 9 ಗಡುವು ನೀಡಲಾಗಿದೆ ಎಂದು ಕ್ರಾಂತಿಕಾರಿ ಒಳಮೀಸಲಾತಿ ಹೋರಾಟ ಸಮಿತಿ ಅಧ್ಯಕ್ಷ ಬಿ.ಆರ್.ಭಾಸ್ಕರ್ ಪ್ರಸಾದ್ ಹೇಳಿದರು.

ಕ್ರಾಂತಿಕಾರಿ ರಥಯಾತ್ರೆಗೆ ಚಿತ್ತಾಪುರ ಪಟ್ಟಣಕ್ಕೆಮಾದಿಗಸಮಾಜದಮುಖಂಡರು ಸ್ವಾಗತಿಸಿದರು. ನಂತರ ಅಂಬಿಗರ ಚೌಡಯ್ಯ ಸಮುದಾಯ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಒಳಮೀಸಲಾತಿ ಜಾರಿಗಾಗಿ ಮಲ್ಲೆ ಮಹದೇಶ್ವರ ಬೆಟ್ಟದಿಂದ ಪ್ರಾರಂಭವಾದ ಕ್ರಾಂತಿಕಾರಿ ರಥಯಾತ್ರೆ 16 ಜಿಲ್ಲೆಗಳಲ್ಲಿ ಸಂಚರಿಸಿದ್ದು, ಇದೀಗ ಕಲಬುರಗಿ ಜಿಲ್ಲೆಗೆ ಆಗಮಿಸಿದ್ದು, ಇಂದಿಗೆ 60 ದಿನಗಳಾಗಿದೆ. ಜೂನ್ 9 ರಂದು ಬೆಂಗಳೂರು ಬೃಹತ್ ಸಮಾವೇಶ ಮಾಡುವ ಮೂಲಕ ಸರ್ಕಾರಕ್ಕೆ ಎಚ್ಚರಿಕೆ ನೀಡಲಾಗುವುದು ಎಂದು ತಿಳಿಸಿದರು.

ಏಪ್ರಿಲ್ 5ರಂದು ಬಾಬು ಜಗಜೀವನರಾಮ್ ಜಯಂತಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾತನಾಡಿ, ಒಳಮೀಸಲಾತಿ ಜಾರಿ ಮಾಡದೇ ಬಡ್ತಿ ಹಾಗೂ ನೇಮಕಾತಿ ಮಾಡುವುದಿಲ್ಲ ಎಂದು ಹೇಳಿದ್ದರು ಆದರೆ ಇವತ್ತಿಗೆ 25 ದಿನಗಳಲ್ಲಿ ಬಡ್ತಿ ನೇಮಕಾತಿಗಳು ನಡೆಯುತ್ತಿವೆ ಸಿಎಂ ತಮ್ಮ ಮಾತು ತಪ್ಪಿದ್ದಾರೆ ಈ ಮೂಲಕ ಮಾದಿಗ ಸಮಾಜಕ್ಕೆ ಅಪಮಾನ ಮತ್ತು ವಂಚನೆ ಮಾಡಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಆಯೋಗದವರಿಗೆ ಕೇಳಿದರೆ ಇದು ನಮ್ಮ ಕೆಲಸವಲ್ಲ ಸರ್ಕಾರದ ಕೆಲಸ, ಸರ್ಕಾರದ ಸಿಎಂ ಅವರಿಗೆ ಕೇಳಿದರೆ ಇದು ಆಯೋಗದ ಕೆಲಸ ನಮ್ಮದು ಏನು ಇಲ್ಲ ಎಂದು ಹಾರಿಕೆ ಹಾಗೂ ದ್ವಂದ್ವ ಹೇಳಿಕೆಗಳು ನೀಡಿದ್ದಾರೆ ಎಂದು ಹೇಳಿದರು.

ರಾಜ್ಯದ ಸಂಡೂರು, ಚೆನ್ನಪಟ್ಟಣ, ಶಿಗ್ಗಾಂವಿ ಈ ಮೂರು ಕ್ಷೇತ್ರಗಳ ಉಪ ಚುನಾವಣೆಯ ಸಂದರ್ಭದಲ್ಲಿ ಸಮಜಾಯಿಷಿ ನೀಡಿ ಮಾದಿಗರ ಮತಗಳು ಪಡೆದು ಗೆಲುವು ಸಾಧಿಸಿದ್ದರು ಆದರೆ ಇಲ್ಲಿವರೆಗೆ ಚಕಾರವೆತ್ತುತ್ತಿಲ್ಲ ಇದರಿಂದ ನಮ್ಮ ಜೊತೆ ಸರ್ಕಾರ ನಾಟಕವಾಡುತ್ತಿದೆ ಇದಕ್ಕೆ ತಕ್ಕ ಉತ್ತರ ನೀಡಲಾಗುವುದು ಎಂದರು.

ಒಳಮೀಸಲಾತಿ ಜಾರಿಗಾಗಿ ಹೋರಾಟ ಇವತ್ತಿನದಲ್ಲ ಕಳೆದ 35 ವರ್ಷಗಳಿಂದ ಹೋರಾಟ ನಡೆಯುತ್ತಿದೆ. ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ ಮಾದಿಗ ಸಮಾಜಕ್ಕೆ ಒಳಮೀಸಲಾತಿ ಜಾರಿ ಮಾಡಬೇಕು ಎಂದು ಆಗ್ರಹಿಸಿದರು.

ಮಾದಿಗ ಸಮಾಜದ ಹಿರಿಯ ಮುಖಂಡ ರಾಜುಮುಕ್ಕಣ್ಣಮಾತನಾಡಿ,ಒಳಮೀಸಲಾತಿ ಜಾರಿಯಾಗಬೇಕು ಎಂದು ಕ್ರಾಂತಿಕಾರಿ ಒಳಮೀಸಲಾತಿ ಹೋರಾಟ ಸಮಿತಿ ಅವರು ರಾಜ್ಯಾದ್ಯಂತ ಹಮ್ಮಿಕೊಂಡಿದ್ದ ಕ್ರಾಂತಿಕಾರಿ ರಥಯಾತ್ರೆಗೆ ಎಲ್ಲರೂ ಪಕ್ಷಬೇಧ ಮರೆತು ಕೈಜೋಡಿಸಬೇಕು ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ದೀಪಕ್ ಹೊಸ್ಲೂರಕರ್, ಗೂಡೆಮಾರ್ನಳ್ಳಿ ನಾಗರಾಜ, ಸಾಮ್ರಾಟ್ ಉಮೇಶ್, ಎಲಿಯಸ್ ರೆಡ್ಡಿ, ಪುಟ್ಟಣ್ಣ ಮೈಸೂರು, ಶ್ರೀಕಾಂತ್ ಹೊಸ್ಸಳ್ಳಿಕರ್, ನಾಗೇಶ್ ಹಲಗಿ, ದುರ್ಗೇಶ್ ಹಣಿಕೇರಾ, ಬಸವರಾಜ ಮುಡಬೂಳ, ಜಗದೀಶ್ ವಾಡಿ ಸೇರಿದಂತೆ ಇತರರು ಇದ್ದರು.

# ಮಹಾಲಕ್ಷ್ಮೀ ಅರ್ಬನ್ ಸೊಸೈಟಿಗೆ 4.02 ಕೋಟಿ ಲಾಭ

**ಮೂಡಲಗಿ :** ನಗರದ ಪ್ರತಿಷ್ಠಿತ ಸಹಕಾರಿ ಸಂಘಗಳಲ್ಲಿ ಒಂದಾದ ಮಹಾಲಕ್ಷ್ಮೀ ಅರ್ಬನ್ ಕೋ–ಆಪ್ ಕ್ರೆಡಿಟ್ ಸೊಸೈಟಿಗೆ ಕಳೆದ ಮಾರ್ಚ 31 ಕ್ಕೆ ರೂ 4.02 ಕೋಟಿ ನಿವ್ವಳ ಲಾಭವಾಗಿದೆ ಎಂದು ಸಂಘದ ಅಧ್ಯಕ್ಷ ಮಲ್ಲಪ್ಪ ಗುರಪ್ಪ ಗಾಣಿಗೇರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಸಂಘದ ಪ್ರಧಾನ ಕಛೇರಿಯಲ್ಲಿ ನಡೆದ ಆಡಳಿತ ಮಂಡಳಿಯ ಸುದ್ದಿಗೋಷ್ಠಿಯಲ್ಲಿ ಸಂಘವು ಮಾರ್ಚ ಅಂತ್ಯಕ್ಕೆ 3.01 ಕೋಟಿ ಶೇರು ಬಂಡವಾಳ, 120.67 ಕೋಟಿ ಠೇವುಗಳು, 19.80 ಕೋಟಿ ನಿಧಿಗಳನ್ನು, ಹೊಂದಿ ವಿವಿಧ ಬ್ಯಾಂಕುಗಳಲ್ಲಿ ಠೇವಣಿದಾರರ ಭದ್ರತೆಗಾಗಿ 33.92 ಕೋಟಿ ಗುಂತಾವಣಿ ಮಾಡಿ, 106.41. ಕೋಟಿ ರೂ ಸಾಲ ವಿತರಿಸಿದ್ದು, ದುಡಿಯುವ ಬಂಡವಾಳ 151.54 ಕೋಟಿ ರೂ ಹೊಂದಿದೆ ಎಂದು ಹೇಳಿದರು.

ಸಂಘವು ಪ್ರಧಾನ ಕಛೇರಿ ಹಾಗೂ 10 ಶಾಖೆಗಳನ್ನು ಹೊಂದಿದ್ದು, ಪ್ರಧಾನ ಕಛೇರಿ, ಖಾನಟ್ಟಿ ಮತ್ತು ಸುಣಧೋಳಿ ಶಾಖೆಗಳು ಸಂಘದ ಸ್ವಂತ ಭವ್ಯವಾದ ಕಟ್ಟಡಗಳನ್ನು ಹೊಂದಿವೆ. ಕಟಕೋಳ ಶಾಖೆಗೆ ನಿವೇಶನ ಖರೀದಿಸಲಾಗಿದೆ. ಎಲ್ಲ ಶಾಖೆಗಳು ಗಣಕೀಕೃತವಾಗಿವೆ. ಪ್ರಾರಂಭದಿಂದಲೂ ಶೇಕಡಾ 15 ಶೇರು ಲಾಭಾಂಶ ವಿತರಿಸುತ್ತಾ ಶೇರುದಾರರ ವಿಶ್ವಾಸವನ್ನು ಗಳಿಸಿರುತ್ತದೆ.

ಸಂಘವು 1992 ನೇ ಇಸ್ವಿಯಲ್ಲಿ ಪ್ರಾರಂಭವಾಗಿದ್ದು, 33 ನೇ ವರ್ಷಕ್ಕೆ ಪಾದಾರ್ಪಣೆ ಮಾಡಿದೆ. ಕಡಿಮೆ ಬಂಡವಾಳದಲ್ಲಿ ಅತೀ ಹೆಚ್ಚು ಲಾಭ ಗಳಿಸಿದ್ದು, ಹೆಚ್ಚಿನ ಪ್ರಮಾಣದಲ್ಲಿ ಸಾಲ ವಸೂಲಾತಿ ಆಗಿದೆ. ಇದಕ್ಕೆಲ್ಲ ಸಂಘದ ಪ್ರಧಾನ ಕಛೇರಿಯ ಆಡಳಿತ ಮಂಡಳಿ ಸದಸ್ಯರು, ಸರ್ವ ಸಿಬ್ಬಂದಿ ವರ್ಗ ಹಾಗೂ ಶಾಖೆಗಳ ಸಲಹಾ ಸಮಿತಿ ಸದಸ್ಯರ ನಿಸ್ವಾರ್ಥ ಸೇವೆಯೇ ಪ್ರಮುಖ ಕಾರಣವಾಗಿದೆ. ಸಮಯಕ್ಕೆ ಸರಿಯಾಗಿ ಸಾಲ ಮತ್ತು ಬಡ್ಡಿಯನ್ನು ಮರುಪಾವತಿ ಮಾಡಿರುವ ಎಲ್ಲ ಸದಸ್ಯರಿಗೆ ಪ್ರಧಾನ ಕಛೇರಿಯ ಚೇರ್ಮನ್ ಮಲ್ಲಪ್ಪ ಗುರಪ್ಪ ಗಾಣಿಗೇರ ಅಭಿನಂದನೆ ಸಲ್ಲಿಸಿರುತ್ತಾರೆ.

ಸುದ್ದಿಗೋಷ್ಠಿಯಲ್ಲಿ ಉಪಾಧ್ಯಕ್ಷ ಡಾ. ಪ್ರಕಾಶ ಶಿವಪ್ಪ ನಿಡಗುಂದಿ, ಸಂಘದ ಸದಸ್ಯರಾದ ಮುತ್ತಪ್ಪ ಭೀಮಪ್ಪ ಈರಪ್ಪನವರ, ಶಿವಬಸು ರಾಮಪ್ಪ ಖಾನಟ್ಟಿ, ಸಂತೋಷ ತಮ್ಮಣ್ಣಾ ಪಾರ್ಶಿ,

ಮಹಾದೇವ ಚನ್ನಪ್ಪ ಗೋಕಾಕ, ಸಚಿನ ಪರಪ್ಪ ಮುನ್ಯಾಳ, ಸಾಂವಕ್ಕ ಮುರಿಗೆಪ್ಪ ಶೆಕ್ಕಿ, ಭಾರತಿ ರಮೇಶ ಪಾಟೀಲ,

ವಿದ್ಯಾಶ್ರೀ ಸುರೇಶ ಮುರಗೋಡ, ಗೌರವ್ವ ಗಿರಿಗೌಡ ಪಾಟೀಲ, ಶೋಭಾ ಮಾನಕು ಕದಂ,

ಸಂಘದ ಪ್ರಧಾನ ಕಾರ್ಯದರ್ಶಿ ಚನ್ನಬಸಪ್ಪ ಶಿದ್ಲಿಂಗಪ್ಪ ಬಗನಾಳ ಹಾಗೂ ಸಿಬ್ಬಂದಿ ವರ್ಗದವರು ಹಾಜರಿದ್ದರು.

# ಜೆಸಿ ಶಾಲೆಗೆ ಉತ್ತಮ ಫಲಿತಾಂಶ: ಭಾಗ್ಯಶ್ರೀ ಪ್ರಥಮ



**ಮಹಾಲಿಂಗಪುರ :** ಸ್ಥಳೀಯ ನವಚೇತನ ಶಿಕ್ಷಣ ಸಂಸ್ಥೆಯ ಜೆ.ಸಿ. ಆಂಗ್ಲ ಮಾಧ್ಯಮ ಶಾಲೆಯು 2024–25 ನೇ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇ. 90% ಫಲಿತಾಂಶ ಬಂದಿದೆ.

ಭಾಗ್ಯಶ್ರೀ ಬಳವಾಡ 619 (ಶೇ. 99.04) ಪ್ರಥಮ, ಉದಯ ಮುಂಡಾಸ 618 (ಶೇ.98.88) ದ್ವಿತೀಯ, ವರ್ಷಿತಾಗೌಡ ಉತ್ತಂಗಿ 616 (ಶೇ.98.56) ತೃತೀಯ ಸ್ಥಾನ ಗಳಿಸಿದ್ದಾರೆ.

ಸಾಕ್ಷಿ ಗೊಂದಿ (585), ಜಹೀರ ರೋಣ (585), ಸೃಜನ್ ಗೌರೋಜಿ (578), ಸಾಫಿನ್ ಚಿಕ್ಕೋಡಿ (569), ರಹೆನುಮಾ ಮುಜಾವರ (565), ಅಪೂರ್ವ ಮಂಟೂರ (567) 90% ಕ್ಕಿಂತ ಅಧಿಕ ಅಂಕ ಗಳಿಸಿದ್ದಾರೆ.

77 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು. 16 ವಿದ್ಯಾರ್ಥಿಗಳು ಉನ್ನತ ಶ್ರೇಣಿ, 36 ಪ್ರಥಮ ದರ್ಜೆ ಸೇರಿದಂತೆ ಒಟ್ಟು 70 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಸಂಸ್ಥೆಯ ಉಪಾಧ್ಯಕ್ಷ ಶಿವಾನಂದ ತಿಪ್ಪಾ, ಮುಖ್ಯೋಪಾಧ್ಯಾಯ ಎಸ್.ಜಿ.ಕೌಜಲಗಿ ಸಾಧಕ ವಿದ್ಯಾರ್ಥಿಗಳನ್ನು ಅಭಿನಂದಿಸಿದ್ದಾರೆ.

# ಕಲ್ಲೋಳಿ ಎಸ್.ಆರ್.ಇ.ಎಸ್. ಪ್ರಥಮ ದರ್ಜೆ ಕಾಲೇಜಿನ ಎನ್.ಎಸ್.ಎಸ್. ಸ್ವಯಂ ಸೇವಕಿಯರ ಸಾಧನೆ

**ಮೂಡಲಗಿ :** ಇತ್ತೀಚೆಗೆ ಕಾಗವಾಡದ ಶಿವಾನಂದ ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆ ಘಟಕ ಹಾಗೂ ,ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ ಇವರುಗಳ ಸಹಯೋಗದಲ್ಲಿ ಆಯೋಜಿಸಿದ್ದ "ರಾಷ್ಟ್ರೀಯ ಸೇವಾ ಯೋಜನೆ: ನನಗಲ್ಲ, ನಿನಗೆ" ಎಂಬ ವಿಷಯದ ಕುರಿತು ಒಂದು ದಿನದ ರಾಜ್ಯಮಟ್ಟದ ಅಂತರ್ ಕಾಲೇಜು ವಿದ್ಯಾರ್ಥಿ ವಿಚಾರ ಸಂಕೀರಣದಲ್ಲಿ ಕಲ್ಲೋಳಿ ಪಟ್ಟಣದ ರಾಮಲಿಂಗೇಶ್ವರ ಶಿಕ್ಷಣ ಸಂಸ್ಥೆಯ ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ಸ್ವಯಂ ಸೇವಕಿಯರು

ಪ್ರಬಂಧ ಮಂಡಿಸಿ ಕುಮಾರಿ ರಾಜಶ್ರೀ ಕುಂಬಾರ ಪ್ರಥಮ ಸ್ಥಾನ, ಲಕ್ಷ್ಮೀ ಕಲ್ಲೋಳಿ ದ್ವಿತೀಯ ಸ್ಥಾನ ಪಡೆದುಕೊಂಡಿದ್ದಾರೆ.



ಸಾಧನೆ ಗೈದ ರಾಜಶ್ರೀ ಕುಂಬಾರ ಹಾಗೂ ಲಕ್ಷ್ಮೀ ಕಲ್ಲೋಳಿ ಇವರನ್ನು ಸಂಸ್ಥೆಯ ಅಧ್ಯಕ್ಷರಾದ ಶ್ರೀ ಬಸಗೌಡ ಪಾಟೀಲ, ಆಡಳಿತ ಮಂಡಳಿಯ ಸದಸ್ಯರು, ಆಡಳಿತಾಧಿಕಾರಿ ಹಾಗೂ ಪ್ರಾಚಾರ್ಯ ಡಾ. ಸುರೇಶ ಹನಗಂಡಿ, ಕಾರ್ಯಕ್ರಮ ಅಧಿಕಾರಿಗಳಾದ ಪ್ರೊ. ಶಂಕರ ನಿಂಗನೂರ, ಪ್ರೊ. ಡಿ. ಎಸ್. ಹುಗ್ಗಿ, ಪ್ರಾಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಅಭಿನಂದಿಸಿದ್ದಾರೆ.

# ವಿನಾಯಕ ಶಾಲೆಯ ನಿಂಬೆಕ್ಕಗೆ 615 ಅಂಕ

**ತೇರದಾಳ :** ಇಲ್ಲಿನ ಸಸಾಲಟ್ಟಿ ರಸ್ತೆಯಲ್ಲಿರುವ ವಿನಾಯಕ ಪ್ರೌಢಶಾಲೆ ವಿದ್ಯಾರ್ಥಿನಿ ನಿಂಬೆಕ್ಕ ಕಾಡಪ್ಪ ಕತೋಡಿ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 615 (98.04) ಅಂಕ ಪಡೆಯುವ ಮೂಲಕ ಪ್ರಥಮ ಸ್ಥಾನ ಪಡೆದುಕೊಂಡಿದ್ದಾಳೆ. ಅದರಂತೆ ವಿಕ್ರಂ ಸುರೇಶ ರೋಡಕರ 579 (92.64) ದ್ವಿತೀಯ ಹಾಗೂ ನೇತ್ರಾ ಸಿದ್ದಪ್ಪ ಮುಕರಿ 561 (89.76) ಅಂಕ ಪಡೆದು ತೃತೀಯ ಸ್ಥಾನ ಪಡೆದಿದ್ದಾರೆಂದು ಸಂಸ್ಥೆ ಅಧ್ಯಕ್ಷ ಗೌಡಪ್ಪನವರ ತಿಳಿಸಿದ್ದಾರೆ.

# ಮಕ್ಕಳ ಸಾಹಿತ್ಯ ಪರಿಷತ್ ಸಮ್ಮೇಳನ ಜುಲೈ 26 ಜಿಲ್ಲಾಧ್ಯಕ್ಷ ಸಿದ್ರಾಮ ನೀಲಜಗಿ ಪೂರ್ವ ಭಾವಿ ಸಭೆ



**ಬೆಳಗಾವಿ :** ನ್ಯೂ ಸರ್ಕ್ಯೂಟ್ ಹೌಸ್, ನಲ್ಲಿ ನಡೆದ ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತು, ಬೆಳಗಾವಿ ಜಿಲ್ಲಾ ಘಟಕದ ವತಿಯಿಂದ ಪ್ರಥಮ ಮಕ್ಕಳ ಸಾಹಿತ್ಯ ಸಮ್ಮೇಳನದ 2 ನೇ ಪೂರ್ವಭಾವಿ ಸಭೆಯಲ್ಲಿ ಹಲವಾರು ವಿಷಯಗಳನ್ನು ಮಕ್ಕಳ ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾಧ್ಯಕ್ಷರಾದ ಸಿದ್ರಾಮ ನಿಲಜಗಿ ಅವರ ಸಮ್ಮುಖದಲ್ಲಿ ಚರ್ಚಿಸಲಾಯಿತು.

ಜುಲೈ 26 ರಂದು ಬೆಳಗಾವಿಯ ಕುಮಾರ ಗಂಧರ್ವ ಸಭಾ ಭವನದಲ್ಲಿ ಮಕ್ಕಳ ಸಾಹಿತ್ಯ ಪರಿಷತನ ಸಮ್ಮೇಳನ ನಡೆಸಲು ತೀರ್ಮಾನಿಸಲಾಯಿತು.

ಕಾರ್ಯಕ್ರಮದ ರೂಪು ರೇಷೆಗಳನ್ನು ಕುರಿತು ಚರ್ಚೆ ಮಾಡಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಸಕಲ ಸಿದ್ಧತೆಗಳ ಚರ್ಚಿಸಲಾಯಿತು.

ಈ ಸಂದರ್ಭದಲ್ಲಿ ಉಪಾಧ್ಯಕ್ಷರಾದ ಪ್ರಕಾಶ ಹೊಸಮನಿ. ಜಿಲ್ಲಾ ಸಂಘಟನಾ ಕಾರ್ಯದರ್ಶಿ ಎಂ ವೈ ಮೆಣಸಿನಕಾಯಿ.


ಜಿಲ್ಲಾ ನಿರ್ದೇಶಕರಾದ ಗುರುಲಿಂಗ ಮುನ್ಯಾಳ. ಜಿಲ್ಲಾ ಮಾದ್ಯಮ ವಕ್ತಾರ ಮುರಿಗೆಪ್ಪ ಮಾಲಗಾರ. ಹಣಮಂತ ಹರಿಜನ.ಮೂಡಲಗಿ ತಾಲೂಕಾ ಅಧ್ಯಕ್ಷರಾದ ರಮೇಶ ಬಿರಾದಾರ. ಸುಭಾಸ ಕುರಣೆ. ಆನಂದ ಸೊರಗಾಂವಿ.ಸಿ ವೈ ಮೆಣಸಿನಕಾಯಿ. ಹಣಮಂತ ಗುರವ.ಖಂಡೋಬಾ ಹೈಬತ್ತಿ.ಶಿಲ್ಪಾ ಕದಂ.ದಯಾನಂದ ಹುದ್ದಾರ.ಸೇರಿದಂತೆ ಪ್ರಧಾನ ಕಾರ್ಯದರ್ಶಿಗಳು ಮತ್ತು ವಿವಿಧ ತಾಲೂಕಾ ಘಟಕದ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಪದಾಧಿಕಾರಿಗಳು ಹಾಜರಿದ್ದರು.

# ಕೆಎಲ್‌ಇ ಪ್ರೌಢ ಶಾಲೆಗೆ ಶೇ.72 ರಷ್ಟು ಫಲಿತಾಂಶ



**ಮಹಾಲಿಂಗಪುರ :** ಸ್ಥಳೀಯ ಕೆ.ಎಲ್.ಇ. ಸಂಸ್ಥೆಯ ಎಸ್.ಸಿ.ಪಿ. ಪ್ರೌಢಶಾಲೆಯ ಎಸ್.ಎಸ್.ಎಲ್.ಸಿ. ಪರೀಕ್ಷೆ ಫಲಿತಾಂಶ ಶೇ.72 ರಷ್ಟಾಗಿದೆ. ಮಹಾದೇವಿ ಹಳ್ಳೂರ 600 (ಶೇ.96) ಪ್ರಥಮ, ಅಂಕಿತಾ ಬಂಡಿ 596 (ಶೇ.95.36) ಮತ್ತು ಲಕ್ಷ್ಮೀ ಚೆನ್ನದಾಸರ 596 (ಶೇ.95.36) ದ್ವಿತೀಯ ಸ್ಥಾನ ಹಂಚಿಕೊಂಡಿದ್ದಾರೆ. ಕಾರ್ತಿಕ ತೊಂಡಿಕಟ್ಟಿ 595 (ಶೇ.95.02) ತೃತೀಯ ಸ್ಥಾನ ಗಳಿಸಿದ್ದಾರೆ ಎಂದು ಉಪ ಪ್ರಾಂಶುಪಾಲ ಬಿ.ಎನ್.ಅರಕೇರಿ ತಿಳಿಸಿದ್ದಾರೆ.

# ಎಸ್‌ಎಸ್‌ಎಲ್ಸಿ ಫಲಿತಾಂಶ ಮಧಬಾಂವಿ ಪ್ರೌಢಶಾಲೆ 68% ರಷ್ಟು.



**ಮಹಾಲಿಂಗಪುರ :** ಸಮೀಪದ ಮದಭಾಂವಿ ಸರ್ಕಾರಿ ಪ್ರೌಢಶಾಲೆಯ ಎಸ್.ಎಸ್. ಎಲ್.ಸಿ. ಫಲಿತಾಂಶವು ಶೇ. 68.08 ರಷ್ಟು ಆಗಿದೆ. ಪರೀಕ್ಷೆ ಬರೆದ 77 ವಿದ್ಯಾರ್ಥಿಗಳಲ್ಲಿ 53 ವಿದ್ಯಾರ್ಥಿಗಳು ಪಾಸಾಗಿದ್ದಾರೆ. ಮಹಾಲಕ್ಷ್ಮೀ ಹಲಗಿಗೌಡರ 604 (96.64) ಪ್ರಥಮ, ವರ್ಷ ಬಾಣಕಾರ 603 (96.48) ದ್ವಿತೀಯ, ಪವಿತ್ರಾ ತಂಬೂರಿ 586 (93.76%) ತೃತೀಯ ಸ್ಥಾನ ಪಡೆದಿದ್ದಾರೆ. ಸಾಧಕ ವಿದ್ಯಾರ್ಥಿಗಳನ್ನು ಮುಖ್ಯ ಗುರುಗಳಾದ ಆಯ್.ಜಿ.ಯರಗಾಣಿ, ಎಸ್ಡಿಎಂಸಿ ಅಧ್ಯಕ್ಷ ಸದಾಶಿವ ಪಟ್ಟಣಶೆಟ್ಟಿ ಮತ್ತು ಪದಾಧಿಕಾರಿಗಳು, ಶಿಕ್ಷಕರು ಅಭಿನಂದಿಸಿದ್ದಾರೆ.

# ವೆಲ್ಬಾಯಿ ಪಟೇಲ್ ನಿಧನ



**ರಬಕವಿ :** ಇಲ್ಲಿಯ ಕಚ್ಚಿ ಗುಜರಾತಿ ಪಾಟಿದಾರ ಸಮಾಜದ ಹಿರಿಯರು ಮತ್ತು ಬಾಬು ಪಟೇಲ್ ಅವರ ಮಾತೋಶ್ರೀಯಾಗಿದ್ದ ಶ್ರೀಮತಿ ವೆಲ್ಬಾಯಿ ಮನಜಿಭಾಯಿ ಪಟೇಲ್ ಅವರು ತಮ್ಮ 90 ನೆಯ ವಯಸ್ಸಿನಲ್ಲಿ ಮೇ ತಿಂಗಳ 2 ರಂದು ನಿಧನರಾದರು. ಅವರು ತಮ್ಮ ಹಿಂದೆ ಮೂವರು ಪುತ್ರರು, ಇಬ್ಬರು ಪುತ್ರಿಯರು, ಮೊಮ್ಮಕ್ಕಳು, ಮರಿ ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನಗಲಿದ್ದಾರೆ. ದೇವರು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಎಂದು ಧಡಲ್ ಬಾಜಿ ಕನ್ನಡ ದಿನಪತ್ರಿಕೆ ಬಳಗದಿಂದ ಪ್ರಾರ್ಥಿಸುತ್ತೇನೆ.

# ನಗರದ ವಿವಿಧ ಕಾಮಗಾರಿಗಳು, ಅತಿಕ್ರಮಣ ಪ್ರದೇಶಗಳ ಸ್ಥಳಕ್ಕೆ ಡಿಸಿ ಭೇಟಿ, ಪರಿಶೀಲನೆ



**ವಿಜಯಪುರ:** ಜಿಲ್ಲಾಧಿಕಾರಿ ಟಿ.ಭೂಬಾಲನ್ ಅವರು ನಗರದ ವಿವಿಧೆಡೆ ಕೈಗೊಂಡಿರುವ ಕಾಮಗಾರಿ ಹಾಗೂ ಅತಿಕ್ರಮಣವಾಗಿರುವ ಸ್ಥಳಗಳಿಗೆ ಗುರುವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ತಹಶೀಲ್ದಾರ ಕಚೇರಿ ಹಿಂಭಾಗದಲ್ಲಿರುವ ಖಾಲಿ ಜಾಗವನ್ನು ಪರಿಶೀಲನೆ ನಡೆಸಿದ ಅವರು, ಈ ಸ್ಥಳದಲ್ಲಿರುವ ತಗ್ಗು ಗುಂಡಿಗಳನ್ನು ದುರಸ್ತಿಗೊಳಿಸಿ, ಸಮತಟ್ಟುಗೊಳಿಸಿ ಪಾಲಿಕೆ ಆಯುಕ್ತರಿಗೆ ಸೂಚಿಸಿದಅವರು,ನಗರದಾದ್ಯಂತವಿವಿಧೆಡೆ 10 ಸಾವಿರ ಗಿಡಗಳನ್ನು ಬೆಳೆಸುವ ಮೂಲಕ ಹಸಿರು ವಲಯಕ್ಕೆ ಕ್ರಮ ವಹಿಸುವಂತೆ ಅರಣ್ಯಾಧಿಕಾರಿಗಳಿಗೆ ಅವರು ಸೂಚನೆ ನೀಡಿದರು.

ನಗರದ ರಿಂಗ್ ರಸ್ತೆ ಶ್ರೀ ನೇತಾಜಿ ಸುಭಾಷಚಂದ್ರ ಭೋಸ ವೃತ್ತದಿಂದ ಸೊಲ್ಲಾಪುರ ರಾಷ್ಟ್ರೀಯ ಹೆದ್ದಾರಿವರೆಗೆ ಕೈಗೊಂಡಿರುವ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ, ತ್ವರಿತಗತಿಯಲ್ಲಿ ಕಾಮಗಾರಿ ಪೂರ್ಣಗೊಳಿಸಿ,ಸಾರ್ವಜನಿಕರ ಸುಗಮ ಸಂಚಾರಕ್ಕೆ ಕ್ರಮ ವಹಿಸುವಂತೆ ಅವರು ಸೂಚನೆ ನೀಡಿದರು.

ನಗರದ ದರ್ಗಾ ರಸ್ತೆಯಲ್ಲಿ ಸೊಲ್ಲಾಪುರ ಹಳೆಯ ಬೈಪಾಸ್‌ದಿಂದ ದರ್ಗಾ (ಇಟ್ಟಂಗಿಹಾಳ) ರಸ್ತೆವರೆಗೆ ಮುಖ್ಯ ರಸ್ತೆಯಲ್ಲಿರುವ ಅನಧಿಕೃತ-ಒತ್ತುವರಿಯಾಗಿರುವ ಕಟ್ಟಡ-ಶೆಡ್‌ಗಳನ್ನು ತೆರವುಗೊಳಿಸಿ ರಸ್ತೆ ಅಗಲೀಕರಣಕ್ಕಾಗಿ ಲೋಕೋಪಯೋಗಿ ಇಲಾಖೆಗೆ ಹಸ್ತಾಂತರಿಸಲು ಕ್ರಮ ವಹಿಸುವಂತೆ ಅವರು ಸೂಚನೆ ನೀಡಿದರು.

ವಿಜಯಪುರ ನಗರದ ಆಶ್ರಮಕ್ಕೆ ಹೋಗುವ ಮುಖ್ಯ ರಸ್ತೆಯಲ್ಲಿ ಒತ್ತುವರಿ ಮಾಡಿಕೊಂಡು ನಿರ್ಮಿಸಿಕೊಂಡ ವಸತಿ ಹಾಗೂ ವಾಣಿಜ್ಯ ಕಟ್ಟಡಗಳು, ಶೆಡ್‌ಗಳನ್ನು ತೆರವುಗೊಳಿಸಲು ಸ್ಥಳ ಪರಿಶೀಲನೆ ನಡೆಸಿ, ನಿಯಮಾನುಸಾರ ಒತ್ತುವರಿ ತೆರವುಗೊಳಿಸಿ ರಸ್ತೆ ಅಗಲೀಕರಣ ಕಾರ್ಯಕ್ಕೆ ಅವರು ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಆಯುಕ್ತ ವಿಜಯಕುಮಾರ ಮೆಕ್ಕಳಕಿ ಸೇರಿದಂತೆ ವಿವಿಧ ಅಧಿಕಾರಿಗಳು ಉಪಸ್ಥಿತರಿದ್ದರು.

# ನಗರದ ಐತಿಹಾಸಿಕ ಬಾವಿಗಳ ಪುನಶ್ಚೇತನಗೊಳಿಸಿ ನೀರು ಪೂರೈಕೆಗೆ ಕ್ರಮ: ಮೆಕ್ಕಳಕಿ



**ವಿಜಯಪುರ :** ವಿಜಯಪುರ ನಗರದಲ್ಲಿನ ವಿವಿಧ ಐತಿಹಾಸಿಕ ಬಾವಿಗಳನ್ನು ಮಹಾನಗರ ಪಾಲಿಕೆ ವತಿಯಿಂದ ಪುನಶ್ಚೇತನಗೊಳಿಸಿ, ಬಾವಡಿಯಲ್ಲಿರುವ ನೀರನ್ನು ಗೃಹ ಬಳಕೆಗಾಗಿ ಸಾರ್ವಜನಿಕರಿಗೆ ಪೂರೈಸುವ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ಮಹಾನಗರ ಪಾಲಿಕೆ ಆಯುಕ್ತ ವಿಜಯಕುಮಾರ ಮೆಕ್ಕಳಕಿ ತಿಳಿಸಿದ್ದಾರೆ.

ವಿಜಯಪುರ ನಗರದಲ್ಲಿರುವ ಗಚ್ಚಿನಕಟ್ಟಿ ಕಾಲನಿ ಬಾವಡಿ, ಫೋಸ್ಟ್ ಆಫೀಸ್ ಆವರಣದಲ್ಲಿರುವ ಬಾವಡಿ, ಭರತ ಬಾವಡಿ, ಚಂದಾಬಾವಡಿ, ಸೈಟಲೈಟ್ ಬಸ್ ನಿಲ್ದಾಣದ ಹತ್ತಿರದ ರೂಮಾಲ ಬಾವಡಿ, ಆಕೃತಿ ಕಾಲನಿ ಬಾವಡಿ, ಕಣಕಿ ಬಜಾರ ಹತ್ತಿರದ ಸಕ್ರಿ ಬಾವಡಿ, ಚಪ್ಪರಬಂದ ಗಲ್ಲಿಯಲ್ಲಿರುವ ಮುಕ್ರಿಬಾವಡಿ,ಝುಂಡಾ ಕಟ್ಟಾ ಹತ್ತಿರವಿರುವ ಪೇಟಿ ಬಾವಡಿ, ಮನಗೂಳಿಅಗಸಿಹತ್ತಿರವಿರುವಬಸರಿಬಾವಡಿ,ಅಂಜುಮನ್ ಕಾಲೇಜ್ ಹತ್ತಿರವಿರುವ ಬಾವಡಿ, ರಂಭಾಪುರ ಬಾವಡಿ, ವಾರ್ಡ ನಂ.32ರ ಲಿಂಗೇಶ್ವರ ದೇವಸ್ಥಾನದ ಹತ್ತಿರವಿರುವ ಬಾವಡಿ ಹಾಗೂ ಶಾಹು ನಗರದ ಗುಂಡ ಬಾವಡಿಯನ್ನು ಪುನಶ್ಚೇತನಗೊಳಿಸಲಾಗಿದೆ. ಈ ಬಾವಡಿಗಳು ನೀರಿನಿಂದ ಸಮೃದ್ಧವಾಗಿದ್ದು, ಈ ಬಾವಡಿಗಳ ಪೈಕಿ ಈಗಾಗಲೇ 6 ಬಾವಡಿಗಳ ನೀರು ಪೂರೈಕೆ ಮಾಡಲಾಗುತ್ತಿದೆ, ಇನ್ನುಳಿದ ಬಾವಿಗಳಿಂದಲೂ ಸಹ 10 ದಿನಗಳೊಳಗಾಗಿ ನೀರು ಪೂರೈಕೆಗೆ ಕ್ರಮ ವಹಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ.

ಜಿಲ್ಲಾ ಉಸ್ತುವಾರಿ ಸಚಿವರ ನಿರ್ದೇಶನದಂತೆ ಹಾಗೂ ಜಿಲ್ಲಾಧಿಕಾರಿಗಳಮಾರ್ಗದರ್ಶನದಲ್ಲಿ2024-25ನೇಸಾಲಿನ 15ನೇ ಹಣಕಾಸು ಅನುದಾನದಲ್ಲಿ 96.06 ಲಕ್ಷ ರೂ.ಗಳಲ್ಲಿ 6 ಬಾವಿಗಳನ್ನು ಸ್ವಚ್ಛಗೊಳಿಸಿ ಪುನಶ್ಚೇತನಗೊಳಿಸಲಾಗಿದೆ. 13 ಲಕ್ಷ ರೂ.ಗಳ ಪಾಲಿಕೆಯ ಅನುದಾನದಲ್ಲಿ 11 ಬಾವಿಗಳ ಸ್ವಚ್ಛತೆ ಕಾಮಗಾರಿ ಕೈಗೊಳ್ಳಲಾಗಿದೆ. 2025-26ನೇ ಸಾಲಿನ 15ನೇ ಹಣಕಾಸು ಆಯೋಗದ ಅನುದಾನದಲ್ಲಿ 50 ಲಕ್ಷ ರೂ. ಅನುದಾನ ಮೀಸಲಿರಿಸಲಾಗಿದ್ದು, ಒಟ್ಟು ಹೊಸದಾಗಿ 4 ಬಾವಿಗಳ ಪುನಶ್ಚೇತನ ಕಾರ್ಯ ಪ್ರಗತಿಯಲ್ಲಿದೆ. 50 ಲಕ್ಷ ರೂ.ಗಳ ಹೆಚ್ಚುವರಿ ಅನುದಾನದಲ್ಲಿ ನಗರದಲ್ಲಿ ಹೊಸದಾಗಿ ಗುರುತಿಸಲಾದ ವಿವಿಧ ಬಾವಿಗಳು ಹಾಗೂ ಹಿಂದಿನ ಅವಧಿಯಲ್ಲಿ ಸ್ವಚ್ಛಗೊಳಿಸಿದ ಬಾವಿಗಳು ಸೇರಿದಂತೆ ಅವುಗಳಿಗೆ ವಿದ್ಯುತ್ ಮೋಟರ್ ಅಳವಡಿಕೆ, ಪೈಪ್‌ಗಳು ಹಾಗೂ ಸಿಸ್ಟರ್ನಗಳನ್ನು ಅಳವಡಿಸಿ ಬಾವಿಗಳ ಪುನಶ್ಚೇತನ ಕಾರ್ಯ ಕೈಗೊಳ್ಳಲಾಗಿದೆ ಎಂದು ಅವರು ತಿಳಿಸಿದ್ದಾರೆ.

# ಆಚಾರ್ಯ ಶಂಕರರು ಭಾರತದ ಆಧ್ಯಾತ್ಮಿಕ ಪರಂಪರೆಯ ರಕ್ಷಕರು: ಸಂತೋಷ ಬಂಡೆ



**ವಿಜಯಪುರ:** ಭಾರತೀಯಪ್ರಜ್ಞಾಪರಂಪರೆಯಲ್ಲಿ ಶಿಖರಪ್ರಾಯವಾಗಿದ್ದ ಆಚಾರ್ಯ ಶಂಕರರು ಭಾರತೀಯ ಚಿಂತನೆಯ ಮೂಲವೆನಿಸಿದ ವೇದಗಳ ಸಾರವನ್ನು ಪ್ರತಿಪಾದಿಸುತ್ತಾ,ಭಾರತದ ಆಧ್ಯಾತ್ಮಿಕ ಪರಂಪರೆಯ ರಕ್ಷಕರಾಗಿದ್ದರು ಎಂದು ಶಿಕ್ಷಕ ಸಾಹಿತಿ ಸಂತೋಷ ಬಂಡೆ ಹೇಳಿದರು.

ತಾಲೂಕಿನ ನಾಗಠಾಣ ಗ್ರಾಮದ ಅರಿವು ಕೇಂದ್ರದಲ್ಲಿ ಶುಕ್ರವಾರದಂದು ಹಮ್ಮಿಕೊಂಡ ಶಂಕರಾಚಾರ್ಯರ ಜಯಂತ್ಯುತ್ಸವಕ್ಕೆ ಚಾಲನೆ ನೀಡಿ ಮಾತನಾಡಿದರು.

ಅದ್ಭುತ ಬುದ್ಧಿಶಕ್ತಿಯ ಅತ್ಯುತ್ತಮ ಚಿಂತಕರಾಗಿದ್ದ ಶಂಕರರು ಉಪನಿಷತ್ತುಗಳ ಮಹಾನ್ ತಾತ್ವಿಕ ಸತ್ಯಗಳನ್ನು ಪ್ರಚಾರ ಮಾಡುವ ಮೂಲಕ ನಮ್ಮ ರಾಷ್ಟ್ರದ ನಿಜವಾದ ಸಾಂಸ್ಕೃತಿಕ ಆಧಾರವನ್ನು ಮರುಶೋಧಿಸಿದ್ದಾರೆ. ಅವರ ಶ್ರಮಶೀಲ ನಂಬಿಕೆ ಮತ್ತು ದೇಶ ಸೇವೆ ಇಂದಿಗೂ ಪ್ರಸ್ತುತವೆನಿಸುತ್ತದೆ ಎಂದು ಹೇಳಿದರು.

ಗ್ರಂಥಪಾಲಕ ಮಂಜುನಾಥ ಗಂಗನಳ್ಳಿ ಮಾತನಾಡಿ, ಶಂಕರರು8ನೇಶತಮಾನದಲ್ಲಿಯೇಹೇಳಿದಧಾರ್ಮಿಕ ತತ್ವ ವಿಚಾರಗಳು, ಏಕತೆಯನ್ನು ಸಾರುವ ಅದ್ವೈತ ತತ್ವಜ್ಞಾನವು ಇಂದಿನ 21ನೇ ಶತಮಾನದಲ್ಲಿಯೂ ಅತ್ಯಂತ ಪ್ರಸ್ತುತವಾಗಿದೆ ಎಂದು ಹೇಳಿದರು.

ಬಸವರಾಜ ಸಾರವಾಡ ಮಾತನಾಡಿ, ಶಂಕರರು ದೇಶಾದ್ಯಂತ ಸಂಚರಿಸಿ, ಜನರಿಗೆ ಸ್ವ-ನಂಬಿಕೆಯ ಬಗ್ಗೆ ಅರಿವು ಮೂಡಿಸಿದರು. ಅವರ ತತ್ವಾದರ್ಶಗಳನ್ನು ನಾವೆಲ್ಲರೂ ಪಾಲಿಸೋಣ ಎಂದು ಹೇಳಿದರು.

ಸುರೇಶ ಕತ್ನಳ್ಳಿ, ಗಿರಮಲ್ಲ ಹೊಸಟ್ಟಿ, ಆನಂದ ಗಂಗನಳ್ಳಿ, ಅಭಿಷೇಕ ಗುಣಕಿ, ಮಲ್ಲಿಕಾರ್ಜುನ ಗಾಣಿಗೇರ, ಸಂತೋಷ ವಾಲೀಕಾರ ಸೇರಿದಂತೆ ಮಕ್ಕಳು ಭಾಗವಹಿಸಿದ್ದರು.

# ಎಸ್‌ಎಸ್‌ಎಲ್‌ಸಿ ಫಲಿತಾಂಶ: ಚಿಮ್ಮಡ ವಿದ್ಯಾರ್ಥಿಗಳ ಸಾಧನೆ



**ಚಿಮ್ಮಡ :** ಗ್ರಾಮದ ಸರಕಾರಿ ಪ್ರೌಢ ಶಾಲೆಯ ವಿದ್ಯಾರ್ಥಿಗಳು ಪ್ರಸಕ್ತ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಅತ್ಯುತ್ತಮ ರ್‍ಯಾಂಕ್ ಪಡೆಯುವ ಮೂಲಕ ಉತ್ತಮ ಸಾಧನೆ ಮಾಡಿದ್ದಾರೆ.

ಇಲ್ಲಿನ ಸರಕಾರಿ ಪ್ರೌಢ ಶಾಲೆಯಲ್ಲಿ ವ್ಯಾಸಂಗ ಮಾಡಿ ಪರೀಕ್ಷೆಗೆ ಹಾಜರಾದ 133 ವಿದ್ಯಾರ್ಥಿಗಳಲ್ಲಿ 82 ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದು, ಅದರಲ್ಲಿ 12 ವಿದ್ಯಾರ್ಥಿಗಳು ಅತ್ಯುತ್ತಮ ಶ್ರೇಣಿಯಲ್ಲಿ, 43 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದು 24 ವಿದ್ಯಾರ್ಥಿಗಳು ದ್ವಿತಿಯ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದು, ಶಾಲೆಯ ಒಟ್ಟು ಫಲಿತಾಂಶ ಶೇ. 61.65 ರಷ್ಟಾಗಿದೆ ಎಂದು ಶಾಲೆಯ ಪ್ರಭಾರ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಎಂ.ಎಸ್. ಜಿಟ್ಟಿ ತಿಳಿಸಿದ್ದಾರೆ.

ಕುಮಾರಿ ರಕ್ಷಿತಾ ಮಲ್ಲಪ್ಪಾ ಜಾಂಗನೂರ 625 ಕ್ಕೆ 603 (ಶೇ. 96.48) ಅಂಕಗಳಿಸುವ ಮೂಲಕ ಪ್ರೌಢಶಾಲೆಗೆ ಪ್ರಥಮ ಸ್ಥಾನ ಪಡೆದರೆ, ಕುಮಾರಿ ಚೈತ್ರಾ ರಮೇಶ ಬರಗಲ್ಲ 591 (ಶೇ. 94.56) ಕನ್ನಡ ವಿಷಯದಲ್ಲಿ ಶೇ. 100 ಅಂಕ ಪಡೆದು ಶಾಲೆಗೆ ದ್ವಿತೀಯ ಸ್ಥಾನ ಪಡೆದಿದ್ದು, ಕುಮಾರಿ ಚೈತ್ರಾ ಮಲ್ಲಪ್ಪ ತೇಲಿ 580 (92.80) ಕನ್ನಡ ವಿಷಯದಲ್ಲಿ ಶೇ.100 ಅಂಕ ಪಡೆದು ಶಾಲೆಗೆ ತ್ರತೀಯ ಸ್ಥಾನ ಪಡೆದುಕೊಂಡಿದ್ದಾಳೆ. ಎಸ್.ಆರ್.ಎ. ಪ್ರೌಢ ಶಾಲೆಯಲ್ಲಿ ವ್ಯಾಸಂಗ ಮಾಡಿದ ಕುಮಾರಿ ಸೀಮಾ ದುಂಡಪ್ಪಾ ಮುಗಳಖೋಡ 605 (96.80) ಹಾಗೂ ರನ್ನ ಬೆಳಗಲಿಯ ಜ್ಞಾನ ಗುರುಕುಲ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡಿದ ಕುಮಾರಿ ಸಮಪ್ರಿಯಾ ಪ್ರಕಾಶ ಪಾಲಭಾಂವಿ 589 (ಶೇ.94.24) ಹಾಗೂ ಕುಮಾರ ಪ್ರವೀಣ ಕಾಡಪ್ಪಾ ಬೀಳಗಿ 565 (90.40) ಕುಮಾರ ರಿಹಾನ್‌ರಮ್ಜಾನ್‌ಲೇಂಗ್ರೆ545(87.20)ಹಿಂದಿಯಲ್ಲಿ 100 ಅಂಕ ಪಡೆದುಕೊಂಡಿದ್ದಾನೆ. ಕುಮಾರಿ ಸುಪ್ರಿಯಾ ಮೋಹನ ಬಡಿಗೇರ 546 (87.36), ಕುಮಾರಿ ದಾನವ್ವ ಶಿವಲಿಂಗ ಮುಗಳಖೋಡ 539 (86.24), ಕುಮಾರಿ ಪ್ರಜ್ಞಾಸುರೇಶ ಖವಟಗೊಪ್ಪ537 (85.92), ಕುಮಾರಿ ರೀನಾ ಬಾಳೇಶ ಹಳೆಮನಿ 534 (85.44), ಕುಮಾರಿ ಕೀರ್ತಿ ಬಸವಂತ ಬಡಿಗೇರ 533 (85.28), ಕುಮಾರಿ ಅಶ್ವಿನಿ ರೇಣುಕಾ ದೊಡವಾಡ 533 (85.28), ಕುಮಾರಿ ವರ್ಷಾ ರಮೇಶ ತೇಲಿ 532 (85.12), ಕುಮಾರಿ ಸನಾ ಫರೀದ ಹೊರಟ್ಟಿ 526 (84.16) ಅಂಕಗಳನ್ನು ಪಡೆದುಕೊಂಡು ಅತ್ಯುತ್ತಮ ಶ್ರೇಣಿಯಲ್ಲಿ ತೇರ್ಗಡೆ ಹೊಂದುವ ಮೂಲಕ ಉತ್ತಮ ಸಾಧನೆಗೈದಿದ್ದಾರೆ. ಗ್ರಾಮಕ್ಕೆ ಕೀರ್ತಿ ತಂದಿರುವ ಎಲ್ಲ ವಿದ್ಯಾರ್ಥಿಗಳನ್ನು ಎಸ್ಡಿಎಂಸಿ ಅಧ್ಯಕ್ಷ ಮಾರುತಿ ಮಮದಾಪೂರ, ಸದಸ್ಯರು, ಶಾಲಾ ಶಿಕ್ಷಕರು, ಸ್ಥಳಿಯ ಗ್ರಾಮ ಪಂಚಾಯತಿ ಹಾಗೂ ಅರುಣೋದಯ ಗ್ರಾಮೀಣಾಭಿವೃದ್ದಿ ಸಂಘ, ಬಸವೇಶ್ವರ ಯುವಕ ಸಂಘದ ಪದಾಧಿಕಾರಿಗಳು ಅಭಿನಂದಿಸಿದ್ದಾರೆ.

# ಸಂದೀಪ ಮನೋಹರ ಬಡಿಗೇರ 94.88 % ಫಲಿತಾಂಶ



**ಬನಹಟ್ಟಿ :** ನಗರದ ನಿವಾಸಿ ಹಾಗೂ ಹಾಲಬಾವಿಯ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ವಿದ್ಯಾರ್ಥಿ ಸಂದೀಪ ಮನೋಹರ ಬಡಿಗೇರ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 593 (94.88%) ಅಂಕ ಪಡೆದು ಉತ್ತಮ ಸಾಧನೆ ಮಾಡಿದ್ದಾನೆ.

ಕನ್ನಡದಲ್ಲಿ 118, ಇಂಗ್ಲೀಷ 99, ಹಿಂದಿ 99, ಗಣಿತ 95, ವಿಜ್ಞಾನ 84, ಸಮಾಜ ವಿಜ್ಞಾನ 98 ಅಂಕ ಪಡೆದುಕೊಂಡಿದ್ದಾನೆ.

# ಸಿದ್ಧೇಶ್ವರ ಶಾಲೆ: ರೇಣುಕಾಗೆ 615 ಅಂಕ

**ತೇರದಾಳ :** ಇಲ್ಲಿನ ಸಿದ್ಧೇಶ್ವರ ವಿದ್ಯಾವರ್ಧಕ ಸಂಘದ ಸಿದ್ಧೇಶ್ವರ ಪ್ರೌಢ ಶಾಲೆಯ ವಿದ್ಯಾರ್ಥಿನಿ ರೇಣುಕಾ ನಿರ್ವಾಣಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 615 (98.04) ರಷ್ಟು ಅಂಕ ಪಡೆದು ಪ್ರಥಮ ಸ್ಥಾನ ಪಡೆದುಕೊಂಡಿದ್ದಾಳೆ. ಪೂಜಾ ಬಾಳಿಕಾಯಿ 614 (98.24) ದ್ವಿತೀಯ ಹಾಗೂ ಸರಸ್ವತಿ ಖೋತ 612 (97.92) ರಷ್ಟು ಅಂಕ ಪಡೆದು ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ. 89 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, 32 ಜನ ಡಿಸ್ಟಿಂಕ್ಷನ್, 46 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ಪಾಸಾಗಿದ್ದು, ಶಾಲೆಯ ಫಲಿತಾಂಶ ಶೇಕಡಾ 98 ರಷ್ಟು ಆಗಿದೆ.

# ಧರ್ಮ ಪಾಲನೆ ಪ್ರತಿಯೊಬ್ಬರ ಜವಾಬ್ದಾರಿ

## ಮಕ್ಕಳನ್ನು ಧಾರ್ಮಿಕ ಶಿಕ್ಷಣ ಶಿಬಿರಗಳಿಗೆ ಕಳಿಸಿ: ಪಾಂಡುರಂಗ ಆಚಾರ್ಯ

**ಮುಧೋಳ :** ಮಕ್ಕಳಿಗೆ ಬೇಸಿಗೆ ರಜೆ ದಿನಗಳಲ್ಲಿ ಧಾರ್ಮಿಕ ಶಿಕ್ಷಣ ಶಿಬಿರಗಳಿಗೆ ಕಳಿಸಿ ಎಂದು ವೇ. ಮೂ. ಪಾಂಡುರಂಗ ಆಚಾರ್ಯ ಜೋಶಿ ಪಾಲಕರಿಗೆ ಕರೆ ನೀಡಿದರು.

ಅವರು ಸೋಮವಾರ ಇಲ್ಲಿನ ರಾಘವೇಂದ್ರ ಮಠದಲ್ಲಿ ಧಾರ್ಮಿಕ ಶಿಕ್ಷಣ ಶಿಬಿರದ ಉದ್ಘಾಟನಾ ಸಮಾರಂಭದಲ್ಲಿಅಧ್ಯಕ್ಷತೆವಹಿಸಿಮಾತನಾಡುತ್ತಿದ್ದರು.

ಧಾರ್ಮಿಕ ಶಿಕ್ಷಣದಿಂದ ಮಕ್ಕಳಲ್ಲಿ ಸಂಸ್ಕಾರಬಲ ಬರುತ್ತದೆ. ಅದರಿಂದ ಮಕ್ಕಳಲ್ಲಿ ಆತ್ಮವಿಶ್ವಾಸ, ಜ್ಞಾಪಕ ಶಕ್ತಿ ಹೆಚ್ಚುತ್ತದೆ. ಮಕ್ಕಳು ಹಿರಿಯರಿಗೆ ಗೌರವ ಕೊಡುವಂಥ ಉನ್ನತ ಸಂಸ್ಕಾರ ಪಡೆಯುತ್ತಾರೆ. ಅದರಿಂದ ವೃದ್ಧಾಶ್ರಮಗಳ ಸಂಖ್ಯೆ ಕಡಿಮೆ ಮಾಡಬಹುದು ಎಂದರು.

ಸಧರ್ಮ ಮಂಡಳ ಅಧ್ಯಕ್ಷ ಆನಂದ ಝೀರೆ ಮಾತನಾಡಿ ಮಕ್ಕಳನ್ನು ಧಾರ್ಮಿಕ ಶಿಕ್ಷಣ ಶಿಬಿರಗಳಿಗೆ ಕಳಿಸುವದಷ್ಟೇ ಪಾಲಕರ ಜವಾಬ್ದಾರಿಯಲ್ಲ. ಮಕ್ಕಳ ಪ್ರಗತಿ ಪರಿಶೀಲಿಸಬೇಕು. ಮಕ್ಕಳ ಸರ್ವತೋಮುಖ ಬೆಳವಣಿಗೆಯಲ್ಲಿ ಪಾಲಕರ ಪಾತ್ರ ಬಹಳ ಮುಖ್ಯ. ಇಂಥ ಒಂದು ಶಿಬಿರ ಪ್ರಾರಂಭವಾಗುತ್ತಿದೆ. ಪಾಲಕರಲ್ಲಿ ಒಬ್ಬರಾದರೂ ಶಿಬಿರ ಉದ್ಘಾಟನೆ ಸಂಧರ್ಭದಲ್ಲಿ ಆಗಮಿಸಬೇಕು. ಶಿಬಿರದ ಮಹತ್ವದ ಬಗ್ಗೆ ಅರಿಯಬೇಕೆಂಬ ಕನಿಷ್ಠ ಜವಾಬ್ದಾರಿ ತೋರದಿರುವುದು ವಿಷಾದನೀಯ ಎಂದರು.

ಜಿಲ್ಲಾ ಬ್ರಾಹ್ಮಣ ಸಂಘದ ಉಪಾಧ್ಯಕ್ಷ ಸೋನಾಪಿ ಕುಲಕರ್ಣಿ, ತಾಲ್ಲೂಕು ಬ್ರಾಹ್ಮಣ ಸಂಘದ ಅಧ್ಯಕ್ಷ ರಾಘವೇಂದ್ರ ಕುಲಕರ್ಣಿ, ವೇ. ಮೂ. ಸುಬ್ಬಣ್ಣಾಚಾರ ಮನಗೂಳಿ ಮಾತನಾಡಿ ಉತ್ತರಾದಿ ಮಠಾಧೀಶರಾದ ಸತ್ಯಾತ್ಮತೀರ್ಥ ಶ್ರೀಪಾದಂಗಳವರು ಪ್ರತಿ ಊರಿನಲ್ಲೂ ಧಾರ್ಮಿಕ ಶಿಬಿರ ನಡೆಯಬೇಕು. ಯಾವ ಮಕ್ಕಳೂ ಸಂಸ್ಕೃತ ಕಲಿಕೆಯಿಂದ ಮತ್ತು ಧಾರ್ಮಿಕ ಶಿಕ್ಷಣದಿಂದ ವಂಚಿತರಾಗಬಾರದೆಂಬ ಉದ್ದೇಶ ಹೊಂದಿದ್ದು, ಮಠದಿಂದ ಅದಕ್ಕಾಗಿ ಪಂಡಿತರನ್ನು ನಿಯೋಜಿಸಿದ್ದಾರೆ ಎಂದರು.

ಬೆಂಗಳೂರಿನ ಉತ್ತರಾದಿ ಮಠದಿಂದ ನಿಯೋಜನೆಗೊಂಡ ಶ್ರೀಕರ ಆಚಾರ್ಯ ಹಾಗೂ ಅನಿರುದ್ಧಆಚಾರ್ಯರುಮಾತನಾಡಿಹಿಂದೂಧರ್ಮ ಅತ್ಯಂತ ಶ್ರೇಷ್ಠ ಧರ್ಮವಾಗಿದ್ದು ಧರ್ಮಾಚರಣೆ ಪ್ರತಿಯೊಬ್ಬರು ಮಾಡಲೇಬೇಕು. ಯಾವುದೋ ಕಾರಣಗಳಿಂದ ಧರ್ಮ ಭ್ರಷ್ಟರಾಗಬಾರದು. ಹಿಂದೂ ಧರ್ಮ ಸಂಪೂರ್ಣ ವಿಜ್ಞಾನ ಭರಿತವಾದುದು. ಭೂಮಿ ದುಂಡಗಿದೆ;

ಸೂರ್ಯನ ಸುತ್ತಲೂ ಭೂಮಿ ಮತ್ತು ಎಲ್ಲಾ ಗ್ರಹಗಳು ಸುತ್ತುತ್ತವೆ ಎಂದು ವಿಜ್ಞಾನಿಗಳು ಹೇಳುವ ಮೊದಲೇ ಸಾವಿರಾರು ವರ್ಷಗಳ ಹಿಂದೆಯೇ ಹಿಂದೂ ಧರ್ಮ ಹೇಳಿದೆ. ನಮ್ಮ ಪಂಚಾಂಗ ಹೇಳಿದೆ ಎಂದರು.ಪ್ರಾರಂಭದಲ್ಲಿ

ಯು. ಆರ್. ವಾಳ್ವೇಕರ ಸ್ವಾಗತಿಸಿದರು. ಅರ್ಚನಾ ಭಾರ್ಗವ ಕಟ್ಟಿ ಗಣಪತಿ ಸ್ತೋತ್ರ ಹೇಳಿದರು. ಗೋಪಾಲ ಕಟ್ಟಿ ಸೊಗಸಾಗಿ ನಿರೂಪಿಸಿದರು. ವಿ. ಜಿ. ಕುಲಕರ್ಣಿ ವಂದಿಸಿದರು.

# ಭಗೀರಥರ ನಿಷ್ಠೆ, ದೃಢ ವಿಶ್ವಾಸ ಬೆಳೆಸಿಕೊಳ್ಳಿ




**ರಬಕವಿ-ಬನಹಟ್ಟಿ:** ಭಗೀರಥಮಹರ್ಷಿಗಳು ಅಂದಿನ ಕಾಲದ ಸಮಾಜಕ್ಕೆ ಸಾಕಷ್ಟು ಕೊಡುಗೆಯನ್ನು ನೀಡಿದ್ದರು. ಭಗೀರಥ ಮಹರ್ಷಿಗಳ ಜೀವನ ಚರಿತ್ರೆಯನ್ನು ಓದುವುದರ ಮೂಲಕ ಅವರ ನಿಷ್ಠೆ, ದೃಢ ವಿಶ್ವಾಸ ಮತ್ತು ಅವರ ತತ್ವ ಸಿದ್ಧಾಂತಗಳನ್ನು ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಶಾಸಕ ಸಿದ್ದು ಸವದಿ ತಿಳಿಸಿದರು.

ಭಾನುವಾರ ರಬಕವಿ-ಬನಹಟ್ಟಿ ತಹಶೀಲ್ದಾರ್ ಕಾರ್ಯಾಲಯದಲ್ಲಿ ಭಗೀರಥಮಹಷಿ9ಗಳಜಯಂತ್ಯೋತ್ಸವದ ಅಂಗವಾಗಿ ಹಮ್ಮಿಕೊಂಡ ಸಮಾರಂಭದಲ್ಲಿ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದರು.

ಸಮಾಜದ ಹಿರಿಯರು ತಮ್ಮ ಮಕ್ಕಳಿಗೆ ಉತ್ತಮಸಂಸ್ಕಾರಮತ್ತುಶಿಕ್ಷಣನೀಡುವುದರ ಮೂಲಕ ಅವರನ್ನು ವಿದ್ಯಾವಂತರನ್ನಾಗಿ ಮಾಡಬೇಕು.

ವಿದ್ಯೆಯಿಂದ ಜೀವನದಲ್ಲಿ ಯಶಸ್ಸನ್ನು ಸಾಧಿಸಬಹುದಾಗಿದೆ ಎಂದು ಸವದಿ ತಿಳಿಸಿದರು.

ಸಮಾಜದ ಮುಖಂಡ ಭೀಮಸಿ ಪಾಟೀಲ ಮಾತನಾಡಿ, ಚಿಕ್ಕ ಸಮುದಾಯಗಳನ್ನು ಬೆಳೆಸುವ ನಿಟ್ಟಿನಲ್ಲಿ ಸರ್ಕಾರ ಗಮನ ನೀಡಬೇಕು. ಉಪ್ಪಾರ ಸಮಾಜದ ಅಭಿವೃದ್ಧಿಗಾಗಿ ನಮ್ಮನ್ನು ಕೂಡಾ ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕು.

ಈ ನಿಟ್ಟಿನಲ್ಲಿ ಸ್ಥಳೀಯ ಶಾಸಕರು ಸರ್ಕಾರದ ಗಮನಸೆಳೆಯಬೇಕು ಎಂದು ಆಗ್ರಹಿಸಿದರು.

ತಹಶೀಲ್ದಾರ ಗಿರೀಶ ಸ್ವಾದಿ, ಕಂದಾಯ ನಿರೀಕ್ಷಕ ಪ್ರಕಾಶ ಮಠಪತಿ, ಸದಾಶಿವ ಕುಂಬಾರ, ಸಮಾಜದ ಮುಖಂಡರಾದ ಬಸಪ್ಪ ಗೋಪಾಳಿ, ರಾಯಪ್ಪ ಹೆಗ್ಗನ್ನವರ, ಸುರೇಶ ಪಾಟೀಲ, ಬಸವರಾಜ ಶಿರೋಳ, ನಾಗರಾಜ ಕಾಡಾಪೂರ, ಪರಶುರಾಮ ಕಾಖಂಡಕಿ, ಬಿ. ಎಂ. ಹಳೇಮನಿ, ಪ್ರಕಾಶ ಮಠಪತಿ, ರವಿ ಕೊರ್ತಿ, ಶಂಕರ ಪಾಟೀಲ, ಅಲ್ಲಪ್ಪ ಹೊಸೂರ, ಸಂಜು ಕಾಖಂಡಕಿ, ವಿಠ್ಠಲ ಹೆಗ್ಗನ್ನವರ, ಯಲ್ಲಪ್ಪ ಪಾಟೀಲ, ಸುರೇಶ ಕೊಡಗಾನೂರ, ಸಂಗಮೇಶ ಉಪ್ಪಾರ ಸೇರಿದಂತೆ ಇನ್ನೂ ಅನೇಕರು ಉಪಸ್ಥಿತರಿದ್ದರು.

# ಎಸ್‌ಎಸ್‌ಎಲ್ಸಿ ಸಾಧಕ ಮಕ್ಕಳ ಸನ್ಮಾನ



**ಮಹಾಲಿಂಗಪುರ:** ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತಮ ಅಂಕಗಳಿಸಿ ಸಾಧನೆ ಮಾಡಿದ ಸ್ಥಳೀಯ 16 ನೇ ವಾರ್ಡಿನ ಸಾಧಕ ವಿದ್ಯಾರ್ಥಿಗಳನ್ನು ಪುರಸಭೆ ಸದಸ್ಯ ಬಸವರಾಜ ಯರಗಟ್ಟಿ ಅವರ ನೇತೃತ್ವದಲ್ಲಿ ಸನ್ಮಾನಿಸಲಾಯಿತು.

ಸರ್ಕಾರಿ ಪ್ರೌಢಶಾಲೆಯ ಶಿವಲೀಲಾ ರಾವಳ, ಶ್ರಾವಣಿ ರಾಠೋಡ, ಬಸವಾನಂದ ಶಾಲೆಯ ಸ್ನೇಹಾ ಬಡಿಗೇರ, ಜೆ.ಸಿ. ಶಾಲೆಯ ಸೃಜನ್ ಗೌರೋಜಿ ಅವರನ್ನು ಪಾಲಕರ ಸಮ್ಮುಖದಲ್ಲಿ ಸಿಹಿ ವಿತರಿಸಿ,ಗೌರವಿಸಲಾಯಿತು.

ಸದಸ್ಯ ಬಸವರಾಜ ಯರಗಟ್ಟಿ, ನಿವೃತ್ತ ಶಿಕ್ಷಕರಾದ ಎಸ್. ಎಂ. ಅಣ್ಣಿಗೇರಿ, ಕೆ. ಎಂ. ಬಿಜಾಪುರ ಮಾತನಾಡಿ ಸಾಧಕ ವಿದ್ಯಾರ್ಥಿಗಳ ಭವಿಷ್ಯದ ಜೀವನ ಸುಖಮಯವಾಗಿರಲಿ ಎಂದರು.

ಮುಖಂಡರಾದ ಈರಪ್ಪ ದಿನ್ನಿಮನಿ, ಬಸಪ್ಪ ಕೊಪ್ಪದ, ಬಸವರಾಜ ಮಠದ, ಮಹಾಲಿಂಗಪ್ಪ ಶಿರೋಳ, ಮಲ್ಲಪ್ಪ ತೋಟದ, ಮನೋಹರ ಎಲಿಗಾರ, ಶಿವಲಿಂಗ ಗೌರೋಜಿ, ಸಂಜು ರಾಠೋಡ, ಕುಮಾರ ಬಡಿಗೇರ, ಶಿವು ಪಂಕಿ, ವೀರೇಶ ಜಗೇರಿ, ಸಚಿನ ಗೋನಾಳ, ಈರಣ್ಣ ಕೊಪ್ಪದ, ಮಲ್ಲು ಮಗದುಮ್, ಅಪ್ಪಯ್ಯ ಘಟಪಣದಿ ಸೇರಿದಂತೆ ಇನ್ನೂ ಹಲವರು ಪಾಲ್ಗೊಂಡಿದ್ದರು.

# ಗುರುವಿನ ಬಗ್ಗೆ ಗೌರವವಿರಲಿ



**ಬನಹಟ್ಟಿ :** ವಿದ್ಯಾರ್ಥಿಗಳು ತಾವು ಕಲಿತ ಶಿಕ್ಷಣ ಸಂಸ್ಥೆಗಳಿಗೆ ಕೀರ್ತಿ ತರುವಂತಹ ಕಾರ್ಯವನ್ನು ಮಾಡಬೇಕು. ವಿದ್ಯಾರ್ಥಿಗಳ ಬದುಕನ್ನು ರೂಪಿಸಿದ ಶಿಕ್ಷಣ ಸಂಸ್ಥೆಗಳ ಮೇಲೆ ಮತ್ತು ಕಲಿಸಿದ ಗುರುಗಳ ಬಗ್ಗೆ ವಿದ್ಯಾರ್ಥಿಗಳು ಪ್ರೀತಿ, ಅಭಿಮಾನವನ್ನು ಇಟ್ಟುಕೊಳ್ಳಬೇಕು ಎಂದು ನಿವೃತ್ತ ಪ್ರಾಚಾರ್ಯ ಎಸ್. ಎಸ್. ಹೂಲಿ ತಿಳಿಸಿದರು.

ಅವರು ಭಾನುವಾರ ಇಲ್ಲಿನ ಎಸ್. ಟಿ. ಸಿ. ಕಾಲೇಜಿನ ಸಭಾ ಭವನದಲ್ಲಿ 2003 ನೇ ಸಾಲಿನ ಕಲಾ ವಿಭಾಗದ ವಿದ್ಯಾರ್ಥಿಗಳು ಹಮ್ಮಿಕೊಂಡಿದ್ದ ಗುರುವಂದನಾ ಮತ್ತು ಸ್ನೇಹ ಸಂಗಮ ಕಾರ್ಯಕ್ರಮದಲ್ಲಿ ಮಾತನಾಡಿದರು. ನಿವೃತ್ತ ಉಪನ್ಯಾಸಕ ಎಸ್. ಬಿ. ಮಟೋಳ್ಳಿ ಮಾತನಾಡಿ, 22 ವರ್ಷದ ಬಳಿಕವೂ ವಿದ್ಯಾರ್ಥಿಗಳು ತಮ್ಮ ಗುರುಗಳನ್ನು ಸ್ಮರಣೆ ಮಾಡುವ ಕಾರ್ಯ ಮಾದರಿಯಾಗಿದೆ.

ಭಾರತೀಯ ಗುರು ಮತ್ತು ಶಿಷ್ಯ ಪರಂಪರೆ ಶ್ರೇಷ್ಠವಾದುದು. ಜೀವನದಲ್ಲಿ ಗೆಳತನ ಕೂಡಾ ಮುಖ್ಯವಾಗಿದೆ. ಗೆಳೆಯರಲ್ಲಿ ಒಂದಾಗಿ ತಮ್ಮ ಹಳೆಯ ನೆನಪುಗಳನ್ನು ಮೆಲುಕು ಹಾಕುವುದು ಕೂಡಾ ಸಂತೋಷದ ಸಂಗತಿಯಾಗಿದೆ ಎಂದು ತಿಳಿಸಿದರು.

ನಿವೃತ್ತ ಉಪನ್ಯಾಸಕಾರದ ಎಸ್. ಬಿ. ಸುಗ್ಗಮದ, ವೈ. ಡಿ. ಬಾಗಿ, ಎಂ. ಪಿ. ತಾನಪ್ಪಗೋಳ, ಸಿಬ್ಬಂದಿ ವರ್ಗದವರಾದ ಶಿವಕುಮಾರ ಜುಂಜಪ್ಪನವರ, ಬಸವರಾಜ ತಳವಾರ ಮತ್ತು ರಮೇಶ ಹೂಗಾರರನ್ನು ಸನ್ಮಾನಿಸಿದರು.

ವಿದ್ಯಾರ್ಥಿಗಳಾದ ಸದಾಶಿವ ಹಚಡದ, ಅನಿಲ ಬಿದರಿ, ಶೋಭಾ ಶೀಲವಂತ, ಕವಿತಾ ಪಾಟೀಲ, ಸಿದ್ಧರಾಮ ಖಾನಾಪುರ ತಮ್ಮ ಅನಿಸಿಕೆಗಳನ್ನು ತಿಳಿಸಿದರು.

ಈರಣ್ಣ ಬಾಣಕಾರ, ದಾಕ್ಷಾಯಣಿ ಕೊಣ್ಣೂರ, ಗಣೇಶ ಸಾವಳಗಿ, ಆನಂದ ಕುಳ್ಳಿ, ಈಶ್ವರ ಬಡಿಗೇರ, ಗಾಯತ್ರಿ ಯಾದವಾಡ, ಬಸವರಾಜ ಭೂತಿ, ಮಹಾಂತೇಶ ಮುರಗೋಡ ಸೇರಿದಂತೆ ಇನ್ನೂ ಅನೇಕರು ಪಾಲ್ಗೊಂಡಿದ್ದರು.

# ಕೆಸರಗೊಪ್ಪ ಪ್ರೌಢ ಶಾಲೆಗೆ ಲತಾ ಬಾಡಗಿ ಪ್ರಥಮ



**ಮಹಾಲಿಂಗಪುರ :** ಸಮೀಪದ ಕೆಸರಗೊಪ್ಪ ಗ್ರಾಮದ ಸರ್ಕಾರಿ ಪ್ರೌಢ ಶಾಲೆಯ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇ. 62 ರಷ್ಟು ಫಲಿತಾಂಶ ಬಂದಿದೆ. ಪರೀಕ್ಷೆ ಬರೆದ 162 ವಿದ್ಯಾರ್ಥಿಗಳಲ್ಲಿ ಉನ್ನತ ಶ್ರೇಣಿ 21, ಪ್ರಥಮ ದರ್ಜೆ 21, ದ್ವಿತೀಯ ದರ್ಜೆ 28, ಸಾಮಾನ್ಯ ದರ್ಜೆಯಲ್ಲಿ 30 ವಿದ್ಯಾರ್ಥಿಗಳು ಸೇರಿದಂತೆ 100 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಲತಾ ಬಾಡಗಿ 613 (ಶೇ.98.08) ಪ್ರಥಮ, ಅಕ್ಷತಾ ಬ್ಯಾಕೋಡ 596 (ಶೇ.95.36) ದ್ವಿತೀಯ, ಮೀನಾಕ್ಷಿ ಪೂಜೇರಿ 590 (ಶೇ.94.04) ತೃತೀಯ ಸ್ಥಾನ ಗಳಿಸಿದ್ದಾರೆ. ಪುಷ್ಪಾ ಮಾಡಲಗಿ 92.64%, ಅನನ್ಯ ಚನ್ನಾಳ 92.64%, ರಾಜಶ್ರೀ ಮಂಟೂರ 91.84%, ಪ್ರಿಯಾಂಕಾ ದಡ್ಡಿಮನಿ 91.68%, ಅಕ್ಷತಾ ಗುಂಡಿ 91.68% ಸ್ನೇಹಾ ಬ್ಯಾಕೋಡ 90.72% ಅಂಕಗಳನ್ನು ಗಳಿಸಿದ್ದಾರೆ. ಸಾಧಕ ವಿದ್ಯಾರ್ಥಿಗಳನ್ನು ಮುಖ್ಯಶಿಕ್ಷಕ ಸಿ.ವ್ಹಿ.ಚೌಧರಿ, ಮತ್ತು ಎಸ್.ಡಿ.ಎಂ.ಸಿ. ಅಧ್ಯಕ್ಷ ಮಹಾದೇವ ಸಸಾಲಟ್ಟಿ ಅಭಿನಂದಿಸಿದ್ದಾರೆ.

# ಸಂಗಾನಟ್ಟಿಯಲ್ಲಿ ಭಗೀರಥ ಜಯಂತಿ

**ಮಹಾಲಿಂಗಪುರ :** ಸಮೀಪದ ಸಂಗಾನಟ್ಟಿ ಸಿದ್ಧಾರೂಢ ಮಠದಲ್ಲಿ ಇತ್ತೀಚೆಗೆ ಭಗೀರಥ ಜಯಂತಿ ಆಚರಿಸಲಾಯಿತು. ಮದಭಾಂವಿ ಗ್ರಾಮ ಪಂಚಾಯತ್ ಅಧ್ಯಕ್ಷ ಬಸವರಾಜ ನಾಗನೂರ ಮಹರ್ಷಿ ಭಗೀರಥರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು. ಪರಪ್ಪ ಹುದ್ದಾರ, ಉಮೇಶ ಮೇಟಿ, ಲಕ್ಷ್ಮಣ ಇಟ್ನಾಳ, ಸತ್ಯರಾಜು ಸೈದಾಪೂರ ಸೇರಿದಂತೆ ಗ್ರಾಮ ಪಂಚಾಯತ್ ಸದಸ್ಯರು, ಗ್ರಾಮದ ಹಿರಿಯರು, ಉಪ್ಪಾರ ಸಮಾಜದ ಯುವಕರು ಹಾಜರಿದ್ದರು.

"SIHI KAHI" Kannada Daily Morning, Editor, Owner, Publisher, Printer by MARUTI BASAVANTAPPA HOASAMANI Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at SUDIN PRINTERS, Sector No. 33, Shop No. 38 & 40, Opp. Ambedkar Bhavan, NAVANAGAR, BAGALKOT-587 101. Dist : Bagalkot, Karnataka State